# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper

70,000

HAMPI TIMES E-PAPER READERS

94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ:06 Issue:06 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 27.06.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2







## ಮೈಕ್ರೋ ನ್ಯೂಸ್

### ವಿಜಯನಗರ ಜಿಲ್ಲಾ ದಸಾಪ ಅಧ್ಯಕ್ಷರಾಗಿ ನೇಮಕ

**ಹಂಪಿ ಟೈಮ್ಸ್ ಹೊಸಪೇಟೆ**



ನಗರದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನ ಹಿರಿಯ ಕನ್ನಡ ಉಪನ್ಯಾಸಕ ಡಾ. ದಯಾನಂದ ಕಿನ್ನಾಳ್ ಇವರ ಸಾಹಿತ್ಯ ಕೃಷಿಯನ್ನು ಗುರುತಿಸಿ ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ (ರಿ) ಗದಗ ಇವರು ವಿಜಯನಗರ ಜಿಲ್ಲೆಯ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ.

ಕಿನ್ನಾಳ್ ಅವರು ಹೂವಿನಹಡಗಲಿಯಲ್ಲಿ 10 ವರ್ಷ, ಕಮಲಾಪುರದಲ್ಲಿ 10 ವರ್ಷ ಹಾಗೂ ಪ್ರಸಕ್ತದಲ್ಲಿ ಸದರಿ ಕಾಲೇಜಿನಲ್ಲಿ 8 ವರ್ಷಗಳಿಂದ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ನಾಡು ನುಡಿ ನೆಲ ಜಲದ ಬಗ್ಗೆ ಅತೀವ ಮುತುವರ್ಜಿ ಹೊಂದಿದ್ದಾರೆ. ಇವರ ಪ್ರತಿಭೆಯನ್ನು ಮನಗಂಡು ದಸಾಪ ರಾಜ್ಯದಕ್ಷರಾದ ಡಾ. ಅರ್ಜುನ ಗೊಳಸಂಗಿ ಕಾರ್ಯದರ್ಶಿ ಸುಭಾಸ ಹೊದ್ಲೂರ ಹಾಗೂ ಕಲಬುರಗಿಯ ದಸಾಪ ವಿಭಾಗೀಯ ಸಂಯೋಜಕರಾದ ಡಾ. ಗಾಂಧೀಜಿ ಮೊಳಕೇರಿ ಇವರುಗಳು ಕಿನ್ನಾಳ್ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

### ಜೂ.27 ನಾಡಪ್ರಭು ಕೆಂಪೇಗೌಡ ಜಯಂತಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಜೂ.27 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣದ ಹೊಂಗಿರಣದಲ್ಲಿ ಏರ್ಪಡಿಸಲಾಗಿದೆ.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿರಲಿದ್ದಾರೆ.






# ಅರ್ಹರಿಗೆ ಸವಲತ್ತು ವಿತರಣೆ ಕೃಷಿ ವಿಮೆ ಜಾಗೃತಿಗೆ ಡಿಸಿ ಚಾಲನೆ

## ಸಾರ್ವಜನಿಕರಿಂದ ಅಹವಾಲು ಆಲಿಸಿದ ಜಿಲ್ಲಾಧಿಕಾರಿ ಕೂಡ್ಲಿಗಿ ಜನತಾ ದರ್ಶನದಲ್ಲಿ 194 ಅರ್ಜಿಗಳ ಸಲ್ಲಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಜೂನ್ 26ರಂದು ಕೂಡ್ಲಿಗಿ ತಾಲೂಕಿಗೆ ಭೇಟಿ ನೀಡಿ ಸಾರ್ವಜನಿಕರ ಅಹವಾಲು ಆಲಿಸಿದರು.

ಜಿಲ್ಲಾಧಿಕಾರಿಗಳು ಸೈಕಲ್ ಮೇಲೇರಿ ನಗರದ ವಿವಿಧೆಡೆ ಸಂಚರಿಸಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ್ದು ವಿಶೇಷವಾಗಿತ್ತು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್‌ನಿಂದ ಕೂಡ್ಲಿಗಿ ತಾಲೂಕಿನ ಪ್ರವಾಸಿ ಮಂದಿರದಲ್ಲಿ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಶಾಸಕರಾದ ಡಾ.ಎನ್.ಟಿ.ಶ್ರೀನಿವಾಸ್ ಅವರ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳು ಸಾರ್ವಜನಿಕರ ಅಹವಾಲು ಆಲಿಸಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸದಾಶಿವ ಪ್ರಭು ಬಿ, ಉಪ ವಿಭಾಗಧಿಕಾರಿ ಮಹಮ್ಮದ್ ಅಲಿ ಅಕ್ರಂ ಷಾಹ, ತಹಸೀಲ್ದಾರರಾದ ರೇಣುಕಮ್ಮ ಮತ್ತು ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ರವಿಕುಮಾರ ಅವರು ಜಿಲ್ಲಾಧಿಕಾರಿಗಳ ಜೊತೆಗೆ ಅರ್ಜಿಗಳನ್ನು ಪರಿಶೀಲಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್., ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ರಾಮಚಂದ್ರಪ್ಪ, ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಶ್ವೇತಾ, ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರಾದ ಸೋಮಸಿಂಗ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಗುಡ್ಡಪ್ಪ, ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದು ಜಿಲ್ಲಾಧಿಕಾರಿಗಳ ಸೂಚನೆಯಂತೆ ಅರ್ಜಿಗಳ ಬಗ್ಗೆ ಸ್ಥಳದಲ್ಲಿಯೇ ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆಗೆ ಅತೀ ಹೆಚ್ಚು 89 ಅರ್ಜಿಗಳು ಸ್ವೀಕೃತವಾದವು. ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಗೆ 24, ಆಹಾರ ಇಲಾಖೆ 15, ಜೆಸ್ಕಾಂ ಮತ್ತು ಶಿಕ್ಷಣ ಇಲಾಖೆಗೆ ತಲಾ 10, ತೋಟಗಾರಿಕೆ ಇಲಾಖೆ, ಪೊಲೀಸ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಭೂಮಾಪಾನ ಇಲಾಖೆ, ಸಾರಿಗೆ ಇಲಾಖೆಗಳಿಗೆ ತಲಾ 3, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಲೋಕೋಪಯೋಗಿ ಇಲಾಖೆ, ಪಶುಸಂಗೋಪನೆ >>4



# ಸಿಎಂ ರಾಜೀನಾಮೆಗೆ ಆಗ್ರಹಿಸಿ ಜೂ.28 ಎಲ್ಲಾ ಡಿಸಿ ಕಚೇರಿಗೆ ಮುತ್ತಿಗೆ

## ಬಿಜೆಪಿ ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ದಲಿತರ ಏಳ್ಗೆಗಾಗಿಟ್ಟಿದ್ದ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ 187 ಕೋಟಿ ರೂ ಮತ್ತು ಕೇಂದ್ರ ಸರ್ಕಾರ ನೀಡಿದ 87 ಕೋಟಿ ರೂಗಳನ್ನು ಕಾಂಗ್ರೆಸ್ ಸರ್ಕಾರ ಹಣಕಾಸು ನಿಯಮಗಳನ್ನು ಗಾಳಿಗೆ ತೂರಿ ಅವ್ಯವಹಾರ ನಡೆಸಿರುವುದು ಬೆಳಕಿಗೆ ಬಂದಿದ್ದು, ಕೂಡಲೇ ದಲಿತ ನಾಯಕ ಎಂದು ಸ್ವಯಂ ಘೋಷಿಸಿಕೊಂಡಿರುವ ಸಿಎಂ ಸಿದ್ದರಾಮಯ್ಯನವರು ತಮ್ಮ ಸಿಎಂ ಸ್ಥಾನಕ್ಕೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಸಿಎಂ ರಾಜೀನಾಮೆಗೆ ಒತ್ತಾಯಿಸಿ ಜೂ.28 ರಂದು ರಾಜ್ಯಾದ್ಯಂತ ಬೃಹತ್ ಪ್ರತಿಭಟನೆ ನಡೆಸಿ ಎಲ್ಲಾ ಜಿಲ್ಲಾಧಿಕಾರಿ ಕಚೇರಿಗಳಿಗೆ ಮುತ್ತಿಗೆ ಹಾಕಲಾಗುತ್ತದೆ ಎಂದು ಬಿಜೆಪಿ ರಾಜ್ಯ ಎಸ್ಟಿ ಮೋರ್ಚಾದ ರಾಜ್ಯಾಧ್ಯಕ್ಷ ಬಂಗಾರು ಹನುಮಂತ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಗ್ಯಾರಂಟಿ ಯೋಜನೆಗಳಿಂದ ಗೆದ್ದಿರುವ ಕಾಂಗ್ರೆಸ್ ಸರ್ಕಾರದ ಖಜಾನೆ ಖಾಲಿಯಾಗಿದೆ. ಚುನಾವಣೆಗೆ ದಲಿತರ ಅನುದಾನವನ್ನು ಅಕ್ರಮವಾಗಿ ಬಳಸಿದೆ ಎಂದು ಆರೋಪಿಸಿದ ಅವರು, ಇದೀಗ ಗ್ಯಾರಂಟಿಗಳನ್ನು ನಿಭಾಯಿಸಲಾಗದೆ ಪೆಟ್ರೋಲ್, ಹಾಲಿನ ದರ ಸೇರಿದಂತೆ ಸಾಮಾನ್ಯ ಜನರಿಗೆ ನಾನಾ ರಂಗಗಳಲ್ಲಿ ದರ ಏರಿಸಿ ಆರ್ಥಿಕ ಭಾರ ಹೋರಿಸಿದ್ದಾರೆ. ನಿಗಮದಲ್ಲಿ ಅವ್ಯವಹಾರ ನಡೆದಿದ್ದ ಖಚಿತತೆಯ ಆಧರಿಸಿ ಪ.ಪಂ.ಕಲ್ಯಾಣ ಇಲಾಖೆಯ ಸಚಿವ ಬಿ.ನಾಗಂದ್ರರಿಂದ ರಾಜೀನಾಮೆ ಪಡೆಯಲಾಗಿದೆ. ಸರ್ಕಾರ ಹಸ್ತಕ್ಷೇಪವಿಲ್ಲದೆ ಇಷ್ಟೊಂದು ದೊಡ್ಡ ಆರ್ಥಿಕ ಅವ್ಯವಹಾರ ನಡೆಯಲು ಸಾಧ್ಯವೇ ಇಲ್ಲ. ಅನುದಾನ ಅವ್ಯವಹಾರದ ಹಗರಣದಲ್ಲಿ ಭಾಗಿಯಾದ ಎಲ್ಲರನ್ನೂ ಸರ್ಕಾರ ಬಂಧಿಸಬೇಕು. ಸಂಶಯಾತ್ಮಕ ಖಾತೆಗಳಿಗೆ ವರ್ಗಾವಣೆಯಾದ ಕೋಟ್ಯಾಂತರ ರೂಗಳ ವಿವರಗಳನ್ನು ಬಹಿರಂಗೊಳಿಸಿ, ವಾಪಸ್ ನಿಗಮದ ಖಾತೆಗೆ ಜಮಾ ಮಾಡಲಿ. ಸರ್ಕಾರದ ಅನುದಾನವನ್ನು ಸರ್ಕಾರದ ಅನುಮತಿ ಇಲ್ಲದೆ ಖಾಸಗಿ ಬ್ಯಾಂಕಿನಲ್ಲಿ ಖಾತೆ ತೆರೆದಿದ್ದಾರೂ ಏತಕ್ಕೆ?, ಒಂದೇ ವಾರದಲ್ಲಿ ಭಾರಿ ಮೊತ್ತವನ್ನು ಆ ಖಾತೆಗೆ ವರ್ಗಾವಣೆ ಮಾಡಲು ಅನುಮತಿ ಕೊಟ್ಟವರಾರು ಎಂಬುದು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು.


ಮಂಡಲ ಅಧ್ಯಕ್ಷ ಶಂಕರ್ ಮೇಟಿ, ಬಿಜೆಪಿ ವಿವಿಧ ಘಟಕಗಳ ಪದಾಧಿಕಾರಿಗಳಾದ ಅಶೋಕ ಜೀರೆ, ಅಯ್ಯಾಳಿ ತಿಮ್ಮಪ್ಪ, ಗುಜ್ಜಲ ಕಿರಣ್, ಚಂದ್ರು ದೇವಲಾಪುರ, ಜಗದೀಶ ಕಮಟಗಿ, ಅನುರಾಧ

# ಬೆಂಗಳೂರು-ಹೊಸಪೇಟೆ ನಡುವೆ ಒಂದೇ ಭಾರತ್ ರೈಲು ಆರಂಭಿಸಿ

## ರಾಷ್ಟ್ರೀಯ ರೈಲ್ವೇ ಬಳಕೆದಾರರ ಸಲಹಾ ಸಮಿತಿಯ ಹಿರಿಯ ಸದಸ್ಯ ಬಾಬುಲಾಲ್ ಜೈನ್ ಒತ್ತಾಯ

**ಹಂಪಿ ಟೈಮ್ಸ್ ಹೊಸಪೇಟೆ**

ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ಕೈಗಾರಿಕೆಗಳಿಂದ ನೈಋತ್ಯ ರೈಲ್ವೇ ವಲಯಕ್ಕೆ ಅತ್ಯಧಿಕ ಆದಾಯವಾಗುತ್ತಿದ್ದರೂ, ಈ ಭಾಗದ ಜನರ ನಿರೀಕ್ಷೆಗೆ ತಕ್ಕಂತೆ ಪ್ರಯಾಣಿಕರ ರೈಲು ಸಂಪರ್ಕ ಸೌಲಭ್ಯಗಳಿಲ್ಲ. ಕೂಡಲೇ ಬೆಳಗಾವಿ-ಭದ್ರಾಚಲಂ ಪುನರಾಂಭಿಸಬೇಕು. ಬೆಂಗಳೂರು-ಹೊಸಪೇಟೆ ನಡುವೆ ಒಂದೇ ಭಾರತ್ ರೈಲು ಆರಂಭಿಸಿ, ಹುಬ್ಬಳ್ಳಿ-ತೋರಣಗಲ್ಲು ಪ್ಯಾಸೆಂಜರ್ ರೈಲು ವಿಸ್ತರಣೆ ಮಾಡಬೇಕೆಂದು ಒತ್ತಾಯಿಸಿ ನೂತನ



ರೈಲ್ವೇ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಹಾಗೂ ನೈಋತ್ಯ ರೈಲ್ವೇ ವಲಯದ ಪ್ರಧಾನ ವ್ಯವಸ್ಥಾಪಕರಿಗೆ ವಲಯ ರೈಲ್ವೇ ಬಳಕೆದಾರರು ಮತ್ತು ರಾಷ್ಟ್ರೀಯ ರೈಲ್ವೇ ಬಳಕೆದಾರರ ಸಲಹಾ ಸಮಿತಿಯ ಹಿರಿಯ ಸದಸ್ಯರಾದ ಬಾಬುಲಾಲ್ ಜೈನ್ ಮನವಿಪತ್ರ ಸಲ್ಲಿಸಿದ್ದಾರೆ.

ಕೈಗಾರಿಕಾ ಜಿಲ್ಲೆಗಳು ಮತ್ತು ವಿಶ್ವಪಾರಂಪರಿಕ ಪಟ್ಟಿಯಲ್ಲಿರು ಹಂಪಿ ವಿಶ್ವದ ಜನರನ್ನು ಆಕರ್ಷಿಸುತ್ತಿದೆ. ರೈಲು ಸಂಚಾರ ಸಂಖ್ಯೆ ಹೆಚ್ಚಿದಷ್ಟು ಪ್ರವಾಸೋಧ್ಯಮ ಬೆಳೆಯುವುದರ ಜೊತೆ ಜನಸಾಮಾನ್ಯರ ಜೀವನಕ್ಕೂ ಬೆಳಕಾಗಲಿದೆ.



ಬಹುಕಾಲದ ಪ್ರಯಾಣಿಕರ ಬೇಡಿಕೆಗಳನ್ನು ರೈಲ್ವೆ ಖಾತೆ ರಾಜ್ಯ ಸಚಿವರು ಈಡೇರಿಸಿ, ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಒತ್ತಾಯಿಸಿದ್ದಾರೆ.

**ಗಾಡಿ ಸಂಖ್ಯೆ-07335/07336, ಬೆಳಗಾವಿ-ಹೊಸಪೇಟೆ-ಹೈದರಾಬಾದ್-ಭದ್ರಾಚಲಂ ರೈಲು ಪುನಃರಾರಂಭಗೊಳ್ಳಲಿ :**

ಕಳೆದ 3 ವರ್ಷಗಳಿಂದ ಸಂಚರಿಸುತ್ತಿದ್ದ ಈ ರೈಲನ್ನು ಕಳೆದ 2 ತಿಂಗಳಿಂದ ರದ್ದುಪಡಿಸಿರುವುದರಿಂದ ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಹೈದರಾಬಾದ್ ಮತ್ತು ತೆಲಂಗಾಣದ ಕಡೆಗೆ ಹೋಗುವ ಪ್ರಯಾಣಿಕರಿಗೆ ತೊಂದರೆಯಾಗಿದೆ. ವಿಶೇಷವಾಗಿ ಬೆಳಗಾವಿ, ಹುಬ್ಬಳ್ಳಿ, ಗದಗ್, ಕೊಪ್ಪಳ, ವಿಜಯನಗರ, ಬಳ್ಳಾರಿ ಜಿಲ್ಲೆಗಳಿಂದ ಪ್ರಸಿದ್ದ ಯಾತ್ರಾಸ್ಥಳ ಮಂತ್ರಾಲಯಕ್ಕೆ ಹೋಗುವ ಪ್ರಯಾಣಿಕರಿಗೆ ರೈಲು ಸಂಪರ್ಕ ಇಲ್ಲದಂತಾಗಿದೆ. ಈ ರೈಲು ಅತ್ಯಂತ ಅಗತ್ಯವಾಗಿದ್ದು, ಕೂಡಲೇ ಸದರಿ ರೈಲನ್ನು ಪುನರ್ ಆರಂಭಿಸಿ ಖಾಯಂ ಆಗಿ ಸಂಚರಿಸುವಂತೆ ಸೂಚಿಸಬೇಕು.

**ಬೆಂಗಳೂರು-ಹೊಸಪೇಟೆ ನಡುವೆ ಒಂದೇ ಭಾರತ್ ರೈಲು ಆರಂಭ:**

ವಿಶ್ವಪಾರಂಪರಿಕ ತಾಣ ಹಂಪಿ ಹಾಗೂ ಹಲವು ವರ್ಷಗಳಿಂದ ಪ್ರವರ್ಧಮಾನಕ್ಕೆ ಬರುತ್ತಿರುವ ಆಂಜನೇಯನ ಜನ್ಮಸ್ಥಳವಾದ ಅಂಜನಾದ್ರಿಗೆ ರಾಜ್ಯ, ದೇಶ ವಿದೇಶಗಳಿಂದ ಪ್ರತಿನಿತ್ಯ, ಸಾವಿರಾರು ಪ್ರವಾಸಿಗರು ಆಗಮಿಸುತ್ತಿದ್ದಾರೆ. ಆದುದರಿಂದ ಪ್ರವಾಸಿಗರ ಅನುಕೂಲಕ್ಕಾಗಿ ಈ ಎರಡು ನಗರಗಳ ನಡುವೆ ಒಂದೇ ಭಾರತ್ ರೈಲು ಆರಂಭಿಸಿದರೆ ಈ ಭಾಗದಲ್ಲಿ ಪ್ರವಾಸೋದ್ಯಮ ಹಾಗೂ ಆರ್ಥಿಕ ಚಟುವಟಿಕೆಗಳು ಬೆಳವಣಿಗೆಯಾಗುತ್ತವೆ.

**ಗಾಡಿ ಸಂಖ್ಯೆ. 07337/07338, ಹುಬ್ಬಳ್ಳಿ-ತೋರಣಗಲ್ಲು ಪ್ಯಾಸಿಂಜರ್ ರೈಲು ವಿಸ್ತರಿಸಿ:**

ಈ ಹಿಂದೆ ಹುಬ್ಬಳ್ಳಿಯಿಂದ ಗುಂತಕಲ್ ನಡುವೆ ಸಂಚರಿಸುತ್ತಿದ್ದ ಈ ರೈಲು ಪ್ರಸ್ತುತ ತೋರಣಗಲ್ ವರೆಗೆ ಮಾತ್ರ ಸಂಚರಿಸುತ್ತಿದೆ. ಇದರಿಂದ ಪ್ರತಿನಿತ್ಯ ಈ ಭಾಗದಿಂದ ವೈದ್ಯಕೀಯ ಚಿಕಿತ್ಸೆ, ಶಾಲಾ ಕಾಲೇಜುಗಳು, ವ್ಯಾಪಾರ ವಹಿವಾಟಿಗೆ ಬಳ್ಳಾರಿಗೆ ಹೋಗುವ ಪ್ರಯಾಣಿಕರಿಗೆ ತೊಂದರೆಯಾಗಿದೆ, ಈ ರೈಲನ್ನು ಮೊದಲಿನಂತೆ ಗುಂತಕಲ್ ವರೆಗೆ ವಿಸ್ತರಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.




## ವಿಜ್ಞಾನ

### ಗಾಳಿ ಏಕೆ ಗೋಚರಿಸುವುದಿಲ್ಲ?

■ **ಆರ್.ಬಿ.ಗುರುಬಸವರಾಜ**

ಮಧ್ಯಾಹ್ನ ಊಟದ ನಂತರ ತಂದೆಯು ತಣ್ಣನೆಯ ಗಾಳಿಯನ್ನು ಆಸ್ವಾದಿಸುತ್ತ ಮನೆಯ ವರಾಂಡದಲ್ಲಿ ಕುಳಿತಿದ್ದರು. ಇದ್ದಕ್ಕಿದ್ದಂತೆ ವಿದ್ಯುತ್ ಕಡಿತವಾಯಿತು. ಫ್ಯಾನ್ ಬಂದ್ ಆದವು. “ಅಬ್ಬಬ್ಬಾ ಏನು ಸೆಕೆ? ತಡೆದುಕೊಳ್ಳಲು ಆಗ್ತಾ ಇಲ್ಲ” ಎಂದಳು ಮೇರಿ. ‘ಹೊರಗೆ ಬಾರೆ, ಇಲ್ಲಿ ತಣ್ಣನೆಯ ಗಾಳಿ ಇದೆ’ ಎಂದರು ತಂದೆ. ಕೂಡಲೇ ಹೊರಗೆ ಬಂದಳು ಮೇರಿ. “ಡ್ಯಾಡಿ, ಗಾಳಿಯೇನೋ ತಣ್ಣಗೆ ಬೀಸ್ತಾ ಇದೆ. ಆದ್ರೆ ಕಣ್ಣಿಗೆ ಕಾಣ್ತಾ ಇಲ್ವಲ್ಲ” ಎಂದಳು. ಗಾಳಿ ಏಕೆ ಕಣ್ಣಿಗೆ ಕಾಣಲ್ಲ ಎಂಬುದನ್ನು ತಂದೆ ಹೀಗೆ ತಿಳಿಸಿದರು.

ಗಾಳಿಯು ಬರಿಗಣ್ಣಿಗೆ ಗೋಚರಿಸುವುದಿಲ್ಲ. ಏಕೆಂದರೆ ಅದು ಸಾರಜನಕ, ಆಮ್ಲಜನಕ ಮತ್ತು ಕಾರ್ಬನ್ ಡೈಆಕ್ಸೈಡ್, ಆರ್ಗಾನ್ ಮತ್ತು ನಿಯಾನ್ ಇತರ ಅನಿಲಗಳಿಂದ ಕೂಡಿದೆ. ಈ ಅನಿಲಗಳು ಗೋಚರ ಬೆಳಕಿಗೆ ಪಾರದರ್ಶಕವಾಗಿರುತ್ತವೆ. ಗಾಳಿಯು ಗೋಚರ



ಬೆಳಕನ್ನು ಪ್ರತಿಫಲಿಸುವುದಿಲ್ಲ ಅಥವಾ ಹೀರಿಕೊಳ್ಳುವುದಿಲ್ಲ. ಹಾಗಾಗಿ ಗಾಳಿ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಮಾನವನ ಕಣ್ಣಿಗೆ ಕಾಣುವ ವಸ್ತುಗಳು ಬೆಳಕನ್ನು ಹೀರಿಕೊಳ್ಳುತ್ತವೆ ಮತ್ತು ಪ್ರತಿಫಲಿಸುತ್ತವೆ. ಪ್ರತಿಫಲಿಸಿದ ಬೆಳಕು ನಮ್ಮ ಕಣ್ಣುಗಳಿಗೆ ತಾಕಿ ವಸ್ತುಗಳನ್ನು ಗೋಚರಿಸುವಂತೆ ಮಾಡುತ್ತದೆ. ಉದಾಹರಣೆಗೆ, ಮರವು ಗೋಚರಿಸುತ್ತದೆ ಏಕೆಂದರೆ ಅದು ಇತರ ಬಣ್ಣಗಳನ್ನು ಹೀರಿಕೊಂಡು ಹಸಿರು ಬೆಳಕನ್ನು ಪ್ರತಿಫಲಿಸುತ್ತದೆ. ಅಂತೆಯೇ ಎಲ್ಲಾ ವಸ್ತುಗಳು ಬೆಳಕನ್ನು ಹೀರಿಕೊಂಡು ತಮ್ಮದೇ ಆದ ಬೆಳಕನ್ನು ಪ್ರತಿಫಲಿಸುವ ಮೂಲಕ ಕಣ್ಣಿಗೆ ಗೋಚರಿಸುತ್ತವೆ.

ಗಾಳಿಯು ಗೋಚರಿಸದಿದ್ದರೂ ಅದರ ಪರಿಣಾಮಗಳನ್ನು ನಾವು ಗಮನಿಸಬಹುದು. ಗಾಳಿಯ ಉಪಸ್ಥಿತಿಯಿಂದಾಗಿ ಮರದ ಎಲೆಗಳು, ಮೈಮೇಲಿನ ಬಟ್ಟೆಗಳು ಅಲುಗಾಡುತ್ತವೆ, ಗಾಳಿಯಲ್ಲಿ ನೀರಿನ ಅಂಶ ಇದ್ದಾಗ ಅದು ಮಂಜಿನ ರೂಪದಲ್ಲಿ ಗೋಚರಿಸುತ್ತದೆ. ಗಾಳಿಯು ಬೀಸಿದಾಗ ಚರ್ಮವು ಅದರ ಸಂವೇದನೆಯನ್ನು ಅನುಭವಿಸುತ್ತದೆ. ಹೀಗೆ ವಿವಿಧ ಅಂಶಗಳಿಂದ ಗಾಳಿಯ ಉಪಸ್ಥಿತಿ ತಿಳಿಯುತ್ತದೆ.

ಸಾಮಾನ್ಯವಾಗಿ ಗಾಳಿಯು ಅಗೋಚರವಾಗಿದ್ದರೂ, ಕೆಲವು ಪರಿಸ್ಥಿತಿಗಳಲ್ಲಿ ಅದು ಗೋಚರಿಸಬಹುದು. ಉದಾಹರಣೆಗೆ, ಗಾಳಿಯಲ್ಲಿ ನೀರು ಇದ್ದಾಗ ನೀರಾವಿ ರೂಪದಲ್ಲಿ ಕಾಣುತ್ತದೆ. ಅಂತೆಯೇ ಗಾಳಿಯಲ್ಲಿ ಹೊಗೆ ಅಥವಾ ಧೂಳಿನ ಕಣಗಳು ಸೇರಿದಾಗ ಗಾಳಿಯು ಮಬ್ಬು ಅಥವಾ ಅಪಾರದರ್ಶಕದಂತೆ ಕಾಣುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಬಾಗಿಲನು ತೆರೆದು

ನಾನೊಮ್ಮೆ ಉತ್ತರ ಕರ್ನಾಟಕದ ಪ್ರವಾಹಪೀಡಿತ ಹಳ್ಳಿಗೆ ಹೋಗಿದ್ದೆ. ಕಟ್ಟಿಗೆ ಮಾಳಿಗೆ ಮೇಲೆ ಮಣ್ಣಿನ ಮೇಲ್ಮುದ್ದೆ ಹಾಕಿ ಕಟ್ಟಿದ ಮನೆಗಳು ಕುಸಿದು ಧರಾಶಾಯಿ ಆಗಿದ್ದವು. ಅಟ್ಟವು ಮಸಣದಲ್ಲಿ ಎಸೆದುಹೋದ ಅನಾಥ ಚಟ್ಟದಂತೆ ವಾಲಿಕೊಂಡಿತ್ತು. ಅದರೊಳಗಿದ್ದ ಮಡಕೆ, ಸಪ್ಪೆದಂಟಿನ ಕಂತೆ, ಮುರಿದ ನೇಗಿಲು, ಸರವಿ, ಹಳೆಯಕೌದಿ ಬೀದಿಗೆ ಉಚಿತ ದರ್ಶನ ಕೊಡುತ್ತಿದ್ದವು. ಮನೆಯವರು ಅಂಗಳದಲ್ಲಿ ತಬ್ಬಲಿಗಳಂತೆ ಕೂತಿದ್ದರು. ಅದರ ಎದುರು ಮನೆಗಳೂ ಬಿದ್ದಿದ್ದವು. ಒಬ್ಬಾಕೆ ತನ್ನ ಮನೆಯ ಮಣ್ಣನ್ನು ಪಕ್ಕದ ಮನೆಯವಳು ಬಾಚಿಕೊಂಡಿರುವುದಕ್ಕೆ ಲಡಾಯಿ ಶುರುಮಾಡಿದ್ದಳು. ಇಬ್ಬರೂ ಮುಂದೆ ಕೇಶಾಕೇಶಿ ಕುಸ್ತಿಪಟುಗಳಾಗಿ ಕೆಸರ ಮುದ್ದೆಗಳಾಗುತ್ತಿದ್ದರು. ಅವರ ಗಂಡಂದಿರು ತಮಗೇನೂ ಸಂಬಂಧವಿಲ್ಲದಂತೆ ಇಬ್ಬರೂ ಜತೆಯಲ್ಲಿ ಕೂತು ಬೀಡಿಸೇದುತ್ತ ಸಿನಿಮಾದಂತೆ ಸತೀಕಾಳಗವನ್ನು ನೋಡುತ್ತಿದ್ದರು.

ಗಮನಿಸಿದೆ. ಈ ಗೃಹಭಂಗದ ದುರಂತ ನಾಟಕದಲ್ಲಿ ಬಾಗದೆ ಮುರಿಯದೆ ನೆಟ್ಟಗೆ ನಿಂತಿದ್ದು ಬಾಗಿಲು ಚೌಕಟ್ಟುಗಳು ಮಾತ್ರ. ನೀಲಬಣ್ಣ ಬಳಿದಿದ್ದ ಅವುಗಳ ಮೇಲ್ಕಟ್ಟಿನ ಎಡಬಲಗಳಲ್ಲಿ ಬೆಳ್ಳನೆಯ ಸೂರ್ಯ ಚಂದ್ರರಿದ್ದರು. ಈ ಆಗಸ ಕಾಯಗಳು ತಮ್ಮ ಬೆಳಕಿನಿಂದಲೇ ಅರಳಿಸಿದಂತಿದ್ದ ಹೂವೊಂದು ನಡುವೆ ನಗುತ್ತಿತ್ತು. ಎರಡೂ ಬದಿಗೆ ಕುದುರೆಯ ಮುಖಗಳು ಮನೆದೇರನ್ನು ಎಳೆಯುತ್ತಿವೆ ಎಂಬಂತೆ ಸಿಕ್ಕಿಗೊಂಡಿದ್ದವು.

ನಮ್ಮ ಜನ ಬಹಳ ವಿಶೇಷ. ‘ಏನು ಗೂಟ ಬಡ್ಕೊಂಡು ಯಾರೂ ಇರಲ್ಲ. ಒಂದಲ್ಲ ಒಂದಿನ ಹೋಗೋದೇ’ ಎಂದು ನುಡಿಯುತ್ತಾರೆ. ತಮ್ಮ ಮನೆ, ರಾಜ್ಯ, ಕೀರ್ತಿ, ಅಧಿಕಾರಗಳು ಆಚಂದ್ರಾರ್ಕ ಇರಬೇಕು ಎಂದು ಅಪೇಕ್ಷಿಸುತ್ತಾರೆ. ಆದರೆ ಸೂರ್ಯ ಚಂದ್ರರ ಹೆಸರುಳ್ಳ ಎಷ್ಟೊಂದು ಸಾಮ್ರಾಜ್ಯಗಳು ಕಾಲಪ್ರವಾಹದಲ್ಲಿ ಅಳಿದುಹೋಗಿವೆ? ಇನ್ನು ಕಲ್ಲುಮಣ್ಣಿನ ಮನೆಗಳ ಪಾಡೇನು? ಹೀಗಿದ್ದೂ ಮನೆ ಬಿದ್ದರೂ ಕಿಟಕಿಬಾಗಿಲು ಮಾತ್ರ ಹೊಸಮನೆಗೆ ತೊಡವಾಗಿ ಹೋಗಿ ಮರುಜನ್ಮ ಪಡೆಯುತ್ತವೆ. ಹಳೆ ಮನೆಯ ಬಾಗಿಲು–ಕಿಟಕಿ ಮಾರುವ ಗುಜರಿಗಳೇ ಉಂಟು. ಮಾಳಿಗೆ– ಗೋಡೆಗಳನ್ನು ಯಾರೂ ಮಾರುವುದಿಲ್ಲ.

ಬಾಗಿಲು ಮತ್ತು ಅವನ್ನು ಅಪ್ಪಿಹಿಡಿವ ಚೌಕಟ್ಟುಗಳು ನನ್ನಲ್ಲಿ ಏನೇನೊ ಕಲ್ಪನೆ ಕೆರಳಿಸುತ್ತವೆ. ಮನೆಗಳದ್ದು ಮಾತ್ರವಲ್ಲ, ಬಸ್ಸು ರೈಲು ವಿಮಾನ ಟ್ರಜರಿ ಕೋಟೆ ಕೋಳಿದೊಡ್ಡಿ ಗುಬ್ಬಿಗೂಡುಗಳ ಬಾಗಿಲುಗಳನ್ನೂ ಗಮನಿಸುತ್ತೇನೆ. ಹಕ್ಕಿ, ತಾನಷ್ಟೆ ಪ್ರವೇಶಿಸುವಂತೆ, ತನ್ನ ಮರಿಗಳನ್ನು ಕಬಳಿಸುವ ವೈರಿಗಳು ಬಾರದಂತೆ, ಎಷ್ಟು ಜನತದಿಂದ ಬಾಗಿಲಿಡುತ್ತದೆ? ಅಪಹರಿಸಿದ ತಂದ ರಾಜಕುವರಿ ತಪ್ಪಿಸಿಕೊಳ್ಳದಂತೆ ಗುಹೆಗೆ ಬಂಡೆ ಮುಚ್ಚಿಹೋಗುತ್ತಿದ್ದ ರಕ್ಕಸನ ಕತೆ ಓದದವರು ಯಾರು? ಯೋನಿದ್ವಾರದಲ್ಲಿ ಹುಟ್ಟಿ ಬಂದೆಲ್ಲಾ ಎಂದು ಪರಿತಪಿಸುವ ವಿರಕ್ತರ ತತ್ವಪದಗಳನ್ನು ಕೇಳದವರು ಯಾರು? ಪುರಾಣದ ಪ್ರಕಾರ, ಸ್ವರ್ಗ ನರಕಗಳಿಗೂ ಬಾಗಿಲುಗಳಿವೆ. ಅವು ನಿರ್ದಿಷ್ಟ ಕಾಲದಲ್ಲಿ ಎಲ್ಲರಿಗೂ ತೆರೆದುಕೊಳ್ಳುತ್ತವೆ. ಅಲ್ಲಿ ವಿಚಾರಣೆ ನಡೆದು ಒಳಬಿಟ್ಟುಕೊಳ್ಳುವ ವ್ಯವಸ್ಥೆಯೂ ಇದೆ. ಕನಸಿನಲ್ಲೊಮ್ಮೆ ಕುವೆಂಪು ಸ್ವರ್ಗಕ್ಕೆ ಹೋದಾಗ ಬಾಗಿಲೇ ತೆರೆಯಲಿಲ್ಲ. ಹೇಮಿಯ ಗಂಡ ಎಂದು ನುಡಿದ ಬಳಿಕವಷ್ಟೆ ಪ್ರವೇಶ ಸಿಕ್ಕಿತು–ಅಲೀಬಾಬಾನಿಗೆ ಕೊಪ್ಪರಿಗೆ ಸಂಪತ್ತುಳ್ಳ ಗುಹೆಬಾಗಿಲು ಖುಲ್ಜಾ ಸಿಂಸಿಂ ಎಂದಾಗ ತೆರೆದಂತೆ.




**ರಹಮತ್ ತರೀಕೆರೆ**
**ಲೇಖಕರು, ಸಂಸ್ಕೃತಿ ಚಿಂತಕರು**

Hampi Times E-paper
SCAN AND READ

ನನಗೆ ನಮ್ಮೂರನ್ನು ಮಲೆನಾಡಿನ ಹೆಬ್ಬಾಗಿಲು ಎಂದು ಕರೆಯುತ್ತಿರುವುದು ನೆನಪಾಗುತ್ತಿದೆ. ಯಾವುದೇ ದೇಶವನ್ನು ಪ್ರವೇಶಿಸುವಲ್ಲಿ ಸಿಗುವ ಮೊದಲ ಊರೇ ಬಾಗಿಲು. ಬ್ರಿಟಿಶರ ಪಾಲಿಗೆ ಮುಂಬೈ ‘ಗೇಟ್ವೇ ಆಫ್ ಇಂಡಿಯಾ’ ಆಯಿತು. ಕಷ್ಟವೆಂದರೆ, ಒಮ್ಮೆ ಬಾಗಿಲೊಳಗೆ ಬಂದವರು ವಾಪಸಾಗದೆ ಇರುವುದು. ಒಂದೊಮ್ಮೆ ಮರಳಿದರೂ ಅವರನ್ನು ಸ್ವಾಗತಿಸಿದ ಬಾಗಿಲುಗಳು ಸ್ಮಾರಕವಾಗಿ ಉಳಿದುಬಿಡುತ್ತವೆ. ಹಳಗಾಲದಲ್ಲಿ ಊರುಗಳಿಗೆ ಹೆಬ್ಬಾಗಿಲು ಇರುತ್ತಿತ್ತು. ತಳವಾರರು ಸಂಜೆ ಅದನ್ನು ಮುಚ್ಚಿ ಬೆಳಿಗ್ಗೆ ತೆರೆಯುತ್ತಿದ್ದರು. ಊರೆಲ್ಲ ಕೊಳ್ಳೆಹೋದ ಮೇಲೆ ದಿಡ್ಡಿಬಾಗಿಲು ಹಾಕುವ ಗಾದೆ ಹುಟ್ಟಿದ್ದು ಇಂತಹ ಕಡೆಯಲ್ಲೇ. ಒಂದೊಮ್ಮೆ ಸೂರೆ ಹೊಡೆಯುತ್ತ ಅಕಸ್ಮಾತ್ ಕಳ್ಳ ಸಿಕ್ಕರೆ, ಅವನನ್ನು ಶೂಲಕ್ಕೇರಿಸಿ ದಿಡ್ಡಿಬಾಗಿಲಿಗೆ ತೋರಣದಂತೆ ಕಟ್ಟುತ್ತಿದ್ದರು. ನರಸಿಂಹಾವತಾರಿ ವಿಷ್ಣು ಕೂಡ, ಮನೆಯ ಒಳ–ಹೊರವಲ್ಲದ ಹೊಸಿಲನ್ನು ಹಿರಣ್ಯಕಶಿಪು ಸಂಹಾರಕ್ಕೆ ಆರಿಸಿಕೊಂಡು, ಅದನ್ನು ವಧಾಸ್ಥಂಭಕ್ಕೆ ಇಳಿಸಿಬಿಟ್ಟನು.

ನಾವು ಮನೆ ಕಟ್ಟಲು ಆರಂಭಿಸಿದಾಗ ಬನಶಂಕರಿ ಬಾಗಿಲನ್ನು ಇಡಬೇಕೆಂದು ಆಸೆಯಾಯಿತು. ಮೈತುಂಬ ಕುಸುರಿ ಕೆತ್ತನೆಯುಳ್ಳ





ಆ ಬಾಗಿಲು ಕಟ್ಟಿಗೆಯ ಒಡವೆ. ಅದು ರೂಪುಗೊಳ್ಳುವ ಕ್ರಮವೇ ವಿಶಿಷ್ಟ. ಸುತಾರರು ಚೌಕಟ್ಟಿನ ನಾಲ್ಕು ಎಡೆಗಳಿಗೂ ಆಲಂಕಾರಿಕ ಕೆತ್ತನೆ ಮಾಡಿ, ಒಂದರ ಉಗುಲನ್ನು ಇನ್ನೊಂದರ ಚಾಚಿನಲ್ಲಿ ಕೀಲಿಸುವರು. ಬಳಿಕ ಚೌಕಟ್ಟಿಗೆ ಬಾಗಿಲು ಜೋಡಿಸುವಿಕೆ. ನಂತರ ಅದಕ್ಕೆ ಚಿಲಕ, ಕೊಂಡಿ, ಅಗಳಿ, ಕೀಲಿಗಳ ಅಳವಡಿಕೆ. ಹೊರಗಿಂದ ಬಂದವರನ್ನು ಒಳಗಿದ್ದೇ ತಿಳಿಯಲು ಹಣೆಗಣ್ಣಿನಂತಹ ದುರ್ಬೀನು. ಇದು ಮದುಮಗಳನ್ನು ನತ್ತು ಮೂಗುತಿ ಓಲೆಗಳಿಂದ ಅಲಂಕರಿಸುವಂತೆ ತೋರುತ್ತದೆ. ವಿಭಿನ್ನ ಧಾತುಗಳಾದ ಕಟ್ಟಿಗೆ ಲೋಹ ಗಾಜುಗಳೆಲ್ಲ ಒಂದು ಉದ್ದೇಶಕ್ಕೆ ಕೂಡುವುದು, ಮನೆಯೊಳಗಿನ ಮಂದಿಗೆ ಬಾಳತತ್ವವನ್ನೇ ಹೇಳುವಂತೆಯೂ ಕಾಣುತ್ತದೆ.

ಬಾಗಿಲನ್ನು ಎಷ್ಟೇ ಭವ್ಯವಾಗಿ ರಚಿಸಲಿ, ಅದಕ್ಕೊಂದು ಅಸ್ಮಿತೆ ಸಿಗುವುದು ಮುನಿಸಿಪಾಲಿಟಿ ನಂಬರಿನಿಂದ. ಈ ನಂಬರು ಇಡೀ ಮನೆಯನ್ನು ಪ್ರತಿನಿಧಿಸುತ್ತ ಹೊರಲೋಕಕ್ಕೆ ವಿಳಾಸದ ಕೊಂಡಿಯಾಗುವುದು. ಇಂಗ್ಲೆಂಡಿನ ಪ್ರಧಾನಮಂತ್ರಿಯ ಮನೆಯ ಹೆಸರು ಯಾವನಿಗೊತ್ತು? ನಂಬರ್ 10, ಡೌನಿಂಗ್ ಸ್ಟ್ರೀಟ್ ಎಂದರೆ ಎಲ್ಲರಿಗೂ ತಿಳಿಯುತ್ತದೆ. ಬಾಗಿಲುಗಳು ಕೇವಲ ಸಂಖ್ಯೆಗಳನ್ನಲ್ಲ, ಬೇರೆಬೇರೆ ಬರೆಹಕ್ಕೆ ಕಪ್ಪುಹಲಗೆ ಆಗುತ್ತವೆ. ಹಿಂದೆ ಬಾಗಿಲ ಮೇಲೆ ‘ನಾಳೆ ಬಾ’ ಎಂದು ಬರೆಯುತ್ತಿದ್ದರು. ದೆವ್ವ ಅನಕ್ಷರಸ್ತವಾದರೆ ಅಥವಾ ಇಂಗ್ಲೀಶನ್ನಷ್ಟೆ ಕಲಿತಿದ್ದರೆ ಬರೆದೂ ಉಪಯೋಗವಿಲ್ಲ. ಸಾಲವಸೂಲಿಯ ಅಧಿಕಾರಿಗಳು ಎಚ್ಚರಿಕೆ ಅಂಟಿಸಿ ಬಾಗಿಲನ್ನು ನೋಟಿಸು ಬೋರ್ಡನ್ನಾಗಿ ಮಾಡುವುದಿದೆ. ಕೊರೊನಾ ಪೀಡಿತರ ಮನೆಬಾಗಿಲಿಗೆ ಹಚ್ಚಿದ ಪತ್ರಗಳಂತೂ ಇಲ್ಲಿ ಬಾಂಬಿದೆ ಎಂಬಂತೆ ಭಯೋತ್ಪಾದನೆ ಸೃಷ್ಟಿಸಿದ್ದವು.

ದೇಶರಕ್ಷಣೆಗೆ ಸೈನ್ಯವಿದ್ದಂತೆ ಮನೆಗೆ ಬಾಗಿಲು. ಕಳ್ಳಕಾಕರಿಂದ ಪೆಟ್ಟು ತಿಂದರೂ ಜಗ್ಗಬಾರದೆಂದೇ ಅದಕ್ಕೆ ಗಟ್ಟಿತನ. ಮನೆಮಾಲಕರ ಭಯಕ್ಕೂ ಅದರ ರಚನ ವಿನ್ಯಾಸಕ್ಕೂ ಸಂಬಂಧವಿದೆ. ಯಾರಾದರೂ ಬಲವಂತದಿಂದ ಬಾಗಿಲು ಮುರಿಯಲು ಯತ್ನಿಸಿದರೆ, ತಲೆಯ ಮೇಲೆ ಚೂಪಾದ ಹಾರೆ ಬಾಣದಂತೆ ಬೀಳುವ ವ್ಯವಸ್ಥೆಯಿದ್ದ ವಾಡೆಯನ್ನು ನಾನು ನೋಡಿರುವೆ. ಕೋಟೆಗಳಿಗಂತೂ ಚೂಪಾದ ಮೊಳೆನೆಟ್ಟ ಮುಳ್ಳಗಸಿ ಬಾಗಿಲುಗಳಿದ್ದವು. ಮನೆಯೊಳಗಿನ ಸಂಪತ್ತು ಹೆಚ್ಚಿದಷ್ಟೂ ಮುಂಬಾಗಿಲ ಮೇಲೆ ಹೊಣೆ ಹೆಚ್ಚುತ್ತದೆ. ಬಡವರ ತಡಿಕೆ ಬಾಗಿಲಿನ ನಿರಾಳತೆ ಇದಕ್ಕಿಲ್ಲ. ನಾನು ವೈನಾಡಿನಲ್ಲಿ ಆನೆಗಳು ಸುಳಿದಾಡುವ ಪ್ರದೇಶದಲ್ಲಿದ್ದ ಸೋಲಿಗರ ಮನೆಯ ಬಾಗಿಲನ್ನು ನೋಡಿದೆ. ಕಟ್ಟಿದ ಹುರಿ ಬಿಚ್ಚಿ ಒಳಗೆ ಹೋಗಬೇಕು. ಕಳ್ಳತನದ ಪ್ರಶ್ನೆಯೇ ಇಲ್ಲ. ಆದರೆ ನಗರಗಳಲ್ಲಿ ಎಷ್ಟೇ ಗಟ್ಟಿಬಾಗಿಲಿದ್ದರೂ, ಮುರಿದು ನಗನಾಣ್ಯ ದೋಚಿದ ಸುದ್ದಿ ವರದಿಯಾಗುತ್ತವೆ. ಕಳ್ಳರಿಗೂ ಬಾಗಿಲುಗಳಿಗೂ ಯಾವೆಲ್ಲ ರಹಸ್ಯ ಒಪ್ಪಂದಗಳಿವೆಯೊ? ಕಳ್ಳರು ಹೊಕ್ಕ ಮನೆಯ ಬಾಗಿಲು ರಣರಂಗದಲ್ಲಿ ಗಾಯಗೊಂಡ ಸೈನಿಕರಂತೆ ತೋರುತ್ತವೆ.

ಮುಂಬಾಗಿಲಿಗೆ ದೃಢತೆಯಷ್ಟೆ ಅಲಂಕಾರವೂ ಇರುತ್ತದೆ. ಬಾಗಿಲ ಚೌಕಟ್ಟು ಕೆತ್ತನೆಗೆ ಬೇಕಾಗಿ ಅಗಲವಾಗಿರುತ್ತವೆ. ಅವುಗಳ ಮೇಲೆ ಬಳ್ಳಿ ಹಬ್ಬಿ ಹೂಹಣ್ಣು . ಆ ಹಣ್ಣು ತಿನ್ನಲು ಗಿಳಿಗಳು ಕೂರುವವು. ಮನೆದೇವರ ಕೆತ್ತನೆ–ಗಜಲಕ್ಷ್ಮಿ, ಗಣಪತಿ, ಬುದ್ಧ, ತೀರ್ಥಂಕರ. ಅವುಗಳ ಕೆಳಗೆ ಮಾವಿನೆಲೆಯ ಅಥವಾ ನೆಲ್ಲುತೆನೆಯ ತೋರಣ. ಇದಕ್ಕೆ ಹೋಲಿಸಿದರೆ ಜನರಿಂದ ತುಳಿಸಿಕೊಳ್ಳುವ ಹೊಸಿಲಿಗೆ ಅಲಂಕಾರವಿಲ್ಲ. ತುಳಿತಕ್ಕೆ ಒಳಗಾಗುವವರಿಗೆ ಅಲಂಕಾರ ಯಾಕೆ ಎಂಬ ಭಾವವಿರಬೇಕು. ಆದರೇನಂತೆ ಹೊಸಿಲಿಗೆ ನಿತ್ಯಪೂಜೆಯಿದೆ. ಅಂಗಳ ಗುಡಿಸಿ, ಸಗಣಿನೀರು ಚಿಮುಕಿಸಿದ ಬಳಿಕ, ಹೊಸಿಲ ಎರಡೂ ತುದಿಗೆ ಭೂಚಕ್ರದ ರಂಗವಲ್ಲಿ ಬರೆದು ಹೂವಿಡುವ ಪದ್ಧತಿಯಿದೆ. ಮುಖದಿಂದ ವ್ಯಕ್ತಿಯ ಅಂತರಂಗ ಅರಿಯುವಂತೆ, ಹೊಸಿಲನ್ನು ನೋಡಿ ಮನೆಯವರ ಕ್ರಿಯಾಶೀಲತೆ ಅರಿಯಬಹುದು. ಬಸವಣ್ಣನವರು ಹೊಸಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿದರೆ ಮನೆಯೊಳಗೆ ಮನೆಯೊಡೆಯನಿಲ್ಲ ಎಂದು ತಿಳಿಯಿರಿ ಎಂದಿದ್ದು ನಿಜ.

ಹೊಸಿಲು, ಒಳ–ಹೊರ ಜಗತ್ತುಗಳನ್ನು ಒಗ್ಗೂಡಿಸುವ ಅಥವಾ ಬೇರ್ಪಡಿಸುವ ಗಡಿ. ಜಗತ್ತಿನಲ್ಲಿ ಹೆಚ್ಚು ಯುದ್ಧಗಳಾಗಿರುವುದು ಗಡಿ ತಂಟೆಗೆ ತಾನೇ? ಹೊಸಿಲು ಸ್ವಾಗತಿಸುವ ಬೀಳ್ಕೊಡುವ ಕೋಲಾಹಲಕರ ವಿದ್ಯಮಾನಕ್ಕೆ ಸಾಕ್ಷಿ. ಕೆಲವೆಡೆ ಹೊಸಿಲಿಗೆ ತಾಮ್ರದ ಕಾಸಿಟ್ಟು ಮೊಳೆ ಜಡಿವುದುಂಟು–ಲಕ್ಷ್ಮಿ ಮನೆಬಿಟ್ಟು ಹೋಗದಿರಲೆಂದು. ಮದುಮಗಳನ್ನು ತುಂಬಿಸಿಕೊಳ್ಳುವಾಗಲೂ ಮೊಳೆ ಹೊಡೆಯುವರು. ಎಂತಲೇ ಸೊಸೆಮುದ್ದು ಅತ್ತೆಯೊಂದಿಗೆ ಯುದ್ಧವಾದಾಗ ‘ನಾನು ಮೊಳೆ ಬಡಿಸಿಕೊಂಡು ಬಂದೋಳು’ ಎಂದು ತಿರುಗೇಟು ಕೊಡುವಳು. ಆಕೆ ಅಕ್ಕಿ ತುಂಬಿದ ಸೇರನ್ನು ಫುಟ್ಬಾಲಿನಂತೆ ಒದ್ದು, ಮುಂದೆ ನಡೆಯಲಿರುವ ಕದನದ ಸೂಚನೆಯನ್ನು ಅತ್ತೆಗೆ ಆಕೆ ಕೊಟ್ಟಿದ್ದಳು ಕೂಡ. ಹೊಸಲಿಗೆ ಕುದುರೆಲಾಳವನ್ನೂ ಬಡಿಯುವರು. ಸದಾ ಚಲಿಸುವ ಪ್ರಾಣಿಯ ಪಾದರಕ್ಷೆಯಾಗಿದ್ದ ಲಾಳ, ಎಂದೂ ಚಲಿಸದ ಹೊಸಲಿನ ಜತೆ ಕೂಡುವುದೇ ವೈರುಧ್ಯ.

ಸಂಸಾರಲೋಕದಲ್ಲಿ ಹೊಸಿಲು, ಹೊಸ ಸಂಬಂಧ ಸ್ಥಾಪನೆಗೆಂತೊ ಅಂತೆಯೇ ನಂಟಿನ ಕಡಿತಕ್ಕೂ ಸಂಕೇತ. ಎಳೆಗೂಸು ಹೊಸಲು ದಾಟಿದರೆ ಕಾಯಿ ಒಡೆದು ಸಂಭ್ರಮಿಸಲಾಗುತ್ತದೆ. ಅದನ್ನೇ ಗೃಹಿಣಿ ಮಾಡಿದರೆ ಲಕ್ಷ್ಮಣರೇಖೆಯ ಉಲ್ಲಂಘನೆ, ಎಂದು ತಿಳಿಯಲಾಗುತ್ತದೆ. ‘ಹೊಸಿಲು ದಾಟಿದ ಹೆಣ್ಣು’ ನಾಟಕ ಹುಟ್ಟಿದ್ದೇ ಈ ತತ್ವದಲ್ಲಿ. ಅದಿರಲಿ, ತರುಣರಿಗೆ ‘ನಿರಂಕುಶಮತಿಗಳಾಗಿ’ ಎಂದು ಕರೆಗೊಟ್ಟ ಕುವೆಂಪು, ಹೊಸಿಲಾಚೆಗೆ ನೀ ಹೋದರೆ ಮನೆಗೆ ಬೆಳಕಿಲ್ಲ ಎಂದು ಮಹಿಳೆಯರಿಗೆ ಹೇಳಿಬಿಟ್ಟರಲ್ಲ. ಯಾರೇನೇ ಹೇಳಲಿ, ಹೋಗಗೊಡದ ನಿರ್ಬಂಧಗಳೇ ದಾಟಲು ಪ್ರೇರಣೆ ನೀಡುತ್ತ ಬಂದಿವೆ. ಹೊಸಿಲನ್ನು ದಾಟದಿದ್ದರೆ ಮಹಾದೇವಿ ಅಕ್ಕ ಆಗುತ್ತಿರಲಿಲ್ಲ. ರಾಜಕುವರಿ ಮೀರಾ, ಸಂತ ಮೀರಾ ಆಗುತ್ತಿರಲಿಲ್ಲ. ‘ಇಂದಿರಾಬಾಯಿ’ ಕಾದಂಬರಿಯ ನಾಯಕಿಯ ಬಾಳು ಬೆಳಗಿದ್ದೇ ಹೊಸಿಲು ದಾಟುವ ಮೂಲಕ. ಕನ್ನಡ ಪ್ರಾಚೀನ ಸಾಹಿತ್ಯವು 20ನೇ ಶತಮಾನದ ಹೊಸಿಲಲ್ಲಿರುತ್ತ, ಇಂಗ್ಲೀಶ್ ಸಾಹಿತ್ಯದ ಸಂಗ ಮಾಡಿದ್ದರಿಂದಲೇ ಆಧುನಿಕ ಸಾಹಿತ್ಯ ಹುಟ್ಟಿತು. ಲೋಕದ ಯಾವತ್ತೂ ಸೃಜನಶೀಲ ಪ್ರಯೋಗ ಮತ್ತು ನವಸೃಷ್ಟಿಗಳ ಹಿಂದೆ, ಸೀಮೋಲ್ಲಂಘನೆಯ ದುಡುಕುಗಳಿವೆ.

ನನಗೆ ದ್ವಾರಗಳಷ್ಟೇ ದ್ವಾರಪಾಲಕರ ಬಗ್ಗೆ ಕುತೂಹಲ. ಅಮ್ಮ, ತನ್ನ ಕೈಯಾರೆ ಎಂಬ್ರಾಡರಿ ಮಾಡಿದ್ದ ಬಟ್ಟೆತೋರಣದಲ್ಲಿ, ವೆಲಕಂ ಫಲಕದ ನಡುವೆ ಹೂಬಳ್ಳಿ ಹಿಡಿದ ಇಬ್ಬರು ದ್ವಾರಪಾಲಕಿ ಬಾಲೆಯರಿದ್ದರು. ತೋರಣ ಹಳತಾಗಿ ಹರಿಯುವ ತನಕವೂ ಅವರು ನಿಂತಿದ್ದರು. ಗುಡಿಯ ಬಾಗಿಲಲ್ಲಿ ಕತ್ತರಿಗಾಲು ಭಂಗಿಯಲ್ಲಿ ನಿಂತ ಸುಂದರ ದ್ವಾರಪಾಲೆಯರನ್ನು ಗಮನಿಸಿ. ಅವರ ಮುಖದಲ್ಲಿ ದಣಿವಿನ ಭಾವವನ್ನೂ ಶಿಲ್ಪಿಗಳು ಕಾಣಿಸಿರುವರು. ಅರಮನೆಗಳ, ತಾರಾ ಹೋಟೆಲುಗಳ, ಅಪಾರ್ಟುಮೆಂಟುಗಳ ದ್ವಾರಪಾಲಕರಲ್ಲೂ ದಣಿವನ್ನು ಕಾಣಬಹುದು. ಯಾರೇ ಆಗಲಿ, ಅನಂತಕಾಲ ಸುಮ್ಮನೆ ನಿಲ್ಲುವುದಾದರೂ ಹೇಗೆ? ಆದರೆ ಸರ್ಕಾರಿ ಕಛೇರಿಯ ದ್ವಾರಪಾಲಕರು ಹಾಗಲ್ಲ. ಅವರ ಮುಖ ಸುಟಿಯಾಗಿ ಬೆಳಗುತ್ತಿರುತ್ತದೆ. ಒಳಗೆ ಕುರ್ಚಿಯಲ್ಲಿ ಕುಳಿತ ಸಾಹೇಬನಿಗೆ ಸಿಗದ ಅಗ್ರ ಮರ್ಯಾದೆ ಅವರಿಗೆ. ಎಳೆನಿಂಬೆ ಕಾಯಿಯಂಥ ಎಷ್ಟೊ ಸಾಹೇಬರನ್ನು ಕಂಡ ಸಿಪಾಯಿಯ ಮುಖದಲ್ಲಂತೂ ದರ್ಪವ್ಯಂಜಿತ ಭಾವ. ಕಛೇರಿಗೆ ಗಾಂಭೀರ್ಯ ಘನತೆ ಬರುವುದು ಸಾಹೇಬರ ಪದವಿಗಳಿಂದಲ್ಲ; ಸಿಪಾಯಿಯ ಮುಖಭಾವದಿಂದ.

**ಮುಂದುವರೆಯುವುದು...**

# ಪಾಕೇಟ್‌ನಲ್ಲಿ ಹೆಚ್ಚಾದ ಹಾಲಿಗೆ ದರ ಹೆಚ್ಚಳ

## ರಾಹುಲ್ ಗಾಂಧಿ ವಿಪಕ್ಷ ನಾಯಕ ಜವಾಬ್ದಾರಿ ವಹಿಸಿಕೊಂಡಿರುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು.: ಸಿಎಂ ಸಿದ್ದರಾಮಯ್ಯ

■ **ಹಂಪಿ ಟೈಮ್ಸ್ ಬೆಂಗಳೂರು:** ರಾಹುಲ್ ಗಾಂಧಿ ಯವರು ವಿಪಕ್ಷ ನಾಯಕ ಸ್ಥಾನದ ಜವಾಬ್ದಾರಿಯನ್ನು ವಹಿಸಿಕೊಂಡಿರುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಅವರು ಬುಧವಾರ ವಿಧಾನಸೌಧದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಬಿಜೆಪಿ ಹಾಗೂ ನರೇಂದ್ರ ಮೋದಿ ಯವರನ್ನು ಎದುರಿಸಲುರಾಹುಲ್ ಗಾಂಧಿ ಸೂಕ್ತ ವ್ಯಕ್ತಿ . ರಾಹುಲ್ ಗಾಂಧಿಯವರು ಲೋಕಸಭಾ ವಿರೋಧ ಪಕ್ಷದ ಸ್ಥಾನವನ್ನು ಸ್ವೀಕರಿಸಬೇಕೆಂದು ನಾನು ಕೂಡ ಸಲಹೆ ನೀಡಿದ್ದೆ. ಬಿಜೆಪಿ ಹಾಗೂ ನರೇಂದ್ರ ಮೋದಿ ಯವರನ್ನು ಎದುರಿಸಬೇಕಾದರೆ ನೀವೇ ವಿರೋಧಪಕ್ಷದ ನಾಯಕರಾಗಬೇಕೆಂದು ಕಾರ್ಯಕಾರಿಣಿ ಸಮಿತಿ ಹಾಗೂ ನಾನೂ ಒತ್ತಾಯ ಮಾಡಿದ್ದೆ. ರಾಹುಲ್ ಗಾಂಧಿ ಯವರು ಈ ಜವಾಬ್ದಾರಿಯನ್ನು ವಹಿಸಿಕೊಂಡಿರುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು. ನಾನು ಅವರಿಗೆ ತುಂಬಿ ಹೃದಯದ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ ಎಂದು ತಿಳಿಸಿದರು.

**ಹಾಲಿನ ಉತ್ಪಾದನೆ 99 ಲಕ್ಷಕ್ಕಿಂತ ಹೆಚ್ಚಾಗಿದೆ:** ಹಾಲಿನ ದರ ಹೆಚ್ಚಾಗಿಲ್ಲ. ಕಳೆದ ವರ್ಷ ಇದೇ ವೇಳೆಗೆ ಹಾಲಿನ ಉತ್ಪಾದನೆ 90 ಲಕ್ಷ ಲೀಟರ್ ಇತ್ತು. ಈಗ 99 ಲಕ್ಷಕ್ಕಿಂತ ಹೆಚ್ಚಾಗಿದೆ. ರೈತರಿಂದ ನಾವು ಹಾಲು ಪಡೆಯಬೇಕಾಗಿದ್ದು, ಅದನ್ನು ಮಾರಾಟ ಮಾಡಬೇಕಿದೆ. ಅರ್ಧ ಲೀಟರ್ ಪ್ಯಾಕೆಟ್ ನಲ್ಲಿ 50 ಮೀ.ಲೀ ಹೆಚ್ಚು ಮಾಡಿದ್ದು,



ಅದಕ್ಕೆ ತಗುಲುವ 2.10 ರೂ.ಗಳನ್ನು ಪ್ರಮಾಣಕ್ಕೆ ತಕ್ಕಂತೆ ಬೆಲೆ ನಿಗದಿ ಮಾಡಲಾಗಿದೆ ಎಂದು ಪುನರುಚ್ಚರಿಸಿದರು. ಮಾರುಕಟ್ಟೆ ಅಗತ್ಯವಿದೆ. ಹಾಲಿನ ಬೆಲೆ ಹೆಚ್ಚು ಮಾಡಿಲ್ಲ. ಹಾಲು ಹೆಚ್ಚು ಉತ್ಪಾದನೆಯಾಗಿರುವುದನ್ನು ಹೆಚ್ಚು ನೀಡಿ ಅದಕ್ಕೆ ತಕ್ಕದರವನ್ನಷ್ಟೇ ನಿಗದಿ ಮಾಡಲಾಗಿದೆ ಎಂದರು.

**ಹಾಲಿನ ದರ ಏರಿಕೆಯಾಗಿಲ್ಲ:** ಕಾಫಿ ಟೀ ದರಗಳ ಹೆಚ್ಚಳ ಸಲ್ಲದು ಹೊಟೇಲ್ ಮಾಲೀಕರ ಸಂಘದವರು ಸಭೆ ಸೇರಿ ಕಾಫಿ ಟೀ ದರಗಳನ್ನು ಹೆಚ್ಚಿಸಲಾಗುವುದು ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ ಹೇಗೆ ಹೆಚ್ಚಿಸುತ್ತಾರೆ ಹಾಲಿನ ಬೆಲೆ ಏರಿದ್ದರೆ ಮಾತ್ರ ಹೆಚ್ಚಿಸಬೇಕು ಎಂದರು.

ರೈತರಿಂದ ಹಾಲು ಕೊಳ್ಳಬೇಕು ಹೆಚ್ಚಾಗಿ ಉತ್ಪಾದನೆಯಾಗಿರುವ ಹಾಲನ್ನು ರೈತರಿಂದ ಕೊಳ್ಳಬೇಕೆ ಹೊರತು ಚೆಲ್ಲಲಾಗುವುದಿಲ್ಲ. ಕೊಳ್ಳುವವವರಿಗೆ ಹಾಲು ಹೆಚ್ಚಾಗಿ ದೊರೆಯುತ್ತಿದ್ದು ಜನ ಹಾಲನ್ನು ಕೊಳ್ಳಬೇಕು ಎಂದರು.

ಸಂಸದರ ಸಭೆಗೆ ದೆಹಲಿಗೆ ತೆರಳುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ ಹೋಗುವಾಗ ಹೇಳುತ್ತೇನೆ ಎಂದರು.

## ಕವಿ ಮನಸು

### ಬೇಡುವೆ ಶಾರದೆ

ಗಣಿತವ ಕಲಿಯದೆ ಗುಣಿಸಲು ಸೋತೆನು
ತಣಿಯದ ನೋವು ಮನಸಲ್ಲಿ

ತನುಮನ ನೊಂದಿದೆ ಕನಿಕರ ತೋರಿಸು
ಮಣಿದಿಹೆ ತಾಯೆ ಭಕ್ತಿಯಲಿ

ಶಾರದೆ ಕರುಣೆಗೆ ಮೀರಿದುದೇನಿದೆ
ಬಾರದೆ ಅರಿವು ಶಿರದಲ್ಲಿ

ತೀರಿಸೆ ಹಂಬಲ ಕೋರುವೆನನುದಿನ
ಜಾರುವ ಮೊದಲೆ ಬಾಳಲ್ಲಿ

ಓದುವ ವಯಸಲಿ ಮೋದದೆ ಕಳೆಯಿತು
ಹಾದಿಯ ತೊರೆದು ಅಡಿಯಿಟ್ಟು

ಬೋಧಿಪರಿದ್ದರು ಓದಲು ಮರೆತರೆ
ಸಾಧನೆ ಗೈಯೆ ಎಡವಟ್ಟು

ಬಾಳಿನ ಯಾನಕೆ ಕೇಳುವೆ ಜ್ಞಾನವ
ತಾಳದೆ ಮನದ ವೇದನೆಗೆ

ದಾಳಿಯನಿಡುತಿಹ ದೂಳನು ಸರಿಸುತ
ಏಳುವ ಶಕ್ತಿ ನೀಡೆನಗೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಅವಶ್ಯಕತೆ

ಮನುಷ್ಯನಿಗಿದೆ ಪ್ರಕೃತಿಯ ಅವಶ್ಯಕತೆ
ದುರ್ಬಳಕೆಯಾದರೆ ನೀಗಿಸಲಾಗದದರ
ಕೊರತೆ
ಇರಬೇಕು ಮನುಜನಿಗೆ ಇದರ ಬಗ್ಗೆ
ಜಾಗೃತಿ
ಆಧುನಿಕ ಯುಗದಲ್ಲಿ ಹೆಚ್ಚಾಗುತ್ತಿದೆ ವಿಕೃತಿ

ಅವಶ್ಯಕತೆ ಇದ್ದಾಗ ಮಾತ್ರ ವ್ಯಕ್ತಿಗೆ ಬೆಲೆ
ಇಲ್ಲದಿದ್ದಾಗ ಉಂಡು ಬಿಸಾಕಿದ ಎಲೆ
ಅಧಿಕಾರವಿದ್ದರೆ ಹಾಕುವವರು ಜನ ಮಣೆ
ಕೈ ಸೋತಾಗ ಎಲ್ಲದಕ್ಕೂ ನಾವೇ ಹೊಣೆ

ಅವಶ್ಯಕತೆಯಿದ್ದಾಗ ಏನು ಮಾಡಿದರು
ಚಂದವಂತೆ
ಇಲ್ಲವಾದರೆ ಪ್ರಯೋಜನಕ್ಕೆ ಬಾರದ
ನಾಣ್ಯದಂತೆ
ಬದುಕೊಂದು ಹಾವು ಏಣಿ ಆಟದಂತೆ
ಸವಾಲುಗಳನ್ನು ಎದುರಿಸುತ್ತ ಬಾಳಬೇಕಂತೆ

–ಚೇತನ ಭಾರ್ಗವ, ಬೆಂಗಳೂರು

### ದಾರುಣ

ದುರ್ಬಲ ಮನಸ್ಸು ಮತ್ತು ದುರ್ಬಲ
ವ್ಯಕ್ತಿತ್ವ
ವ್ಯಸನಕ್ಕೆ ಮುಖ್ಯ ಕಾರಣ.
ಯುವಜನತೆಯಲ್ಲಿ ದುಶ್ಚಟಗಳ ಅಭ್ಯಾಸ
ಸಮಾಜದ ಸ್ವಾಸ್ಥ್ಯ ಹರಣ.
ಜೀವನದ ಮೌಲ್ಯವನ್ನು ಕಲಿಯದೆ
ಇದ್ದಮೇಲೆ ಯಾತಕೆ ಶಿಕ್ಷಣ?
ಮನಸ್ಸು ಮತ್ತು ವ್ಯಕ್ತಿತ್ವ ಗಟ್ಟಿಗೊಳಿಸದೆ
ಇದ್ದರೆ ಬಾಳು ಆಗುವುದು ದಾರುಣ.

– ಮಂಜುಶ್ರೀ ಮುರಳೀಧರ್.

### ಹೃದಯದರಸಿ

ಒಂದೊಂದು ಕ್ಷಣವು ನಿನಗಾಗಿ
ಹಂಬಲಿಸುವುದು ಈ ಮನ
ಜಗದಲ್ಲಿ ಬೇರೆನು ಬೇಕಿಲ್ಲ ನಿನ್ನ ವಿನಃ
ನಿನ್ನ ಬರುವಿಕೆಗೆ ಕಾದಿಹೆನು ನಾ

ಮನೆಯಂಗಳದಿ ಬಣ್ಣ ಬಣ್ಣದ ಹೂಗಳು
ನಿನ್ನ ಸ್ವಾಗತಿಸಲು ಅರಳಿ ನಿಂತಿವೆ
ತಂಪು ತಂಗಾಳಿಯಂತೆ ಬೀಸಿ
ಬರಬಾರದಾ ಒಮ್ಮೆ ನೀನು

ಮನೆಯಲ್ಲಿ ಕಾಲ್ಗೆಜ್ಜೆಯ ಸಪ್ಪಳ ಕೇಳುವಾಸೆ
ಆ ನಿನ್ನ ಕೋಗಿಲೆಯ ದನಿಗೆ
ಕಿವಿಯಾಗುವಾಸೆ
ತಂದಿರುವೆ ಹಸಿರು ಸೀರೆ ಬಳೆಗಳ
ನಿನ್ನ ಮುಡಿ ಏರಲು ಕಾದಿಹುದು ಮಲ್ಲಿಗೆ

ನನ್ನ ಹೃದಯದರಸಿ ಕೋಪ ಸಾಕಿನ್ನು
ಕೈ ಬಳೆಯ ಸದ್ದಿಲ್ಲ ಬಾಗಿಲಿಗೆ
ರಂಗೋಲಿಯಿಲ್ಲ
ಈ ಮನೆ ಮನದ ಬಾಗಿಲು ನಿನಗಾಗಿ
ತೆರೆದಿದೆ
ಬಲಗಾಲನ್ನಿಟ್ಟು ಬಂದುಬಿಡು ನೀನು.

– ಸುವರ್ಣಾ ಭಟ್ಟ.

# ಉತ್ತಮ ಆರೋಗ್ಯಕ್ಕೆ ಕ್ರೀಡೆಗಳನ್ನು ಆಯ್ಕೆಮಾಡಿಕೊಳ್ಳಿ

## ರಾಜ್ಯಮಟ್ಟದ ಪುನಶ್ಚೇತನ ಕಾರ್ಯಾಗಾರದಲ್ಲಿ ಶಾಸಕ ನೇಮಿರಾಜ್ ನಾಯ್ಕ್ ಕರೆ | ಕ್ರೀಡಾ ಗಾಯಗಳಿಗೆ ಚಿಕಿತ್ಸೆ ಮಾಹಿತಿ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಯುವಸಮುದಾಯ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದರೆ ಕ್ರೀಡೆಗಳನ್ನು ಆಯ್ಕೆಮಾಡಿಕೊಳ್ಳಬೇಕು ಎಂದು ಶಾಸಕ ನೇಮಿರಾಜ್‌ನಾಯ್ಕ್ ಕರೆ ನೀಡಿದರು.

ಪಟ್ಟಣದ ಕನ್ನಿಕಾಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ಕರ್ಮಯೋಗ ಟ್ರಸ್ಟ್, ಕರ್ನಾಟಕ ರಾಜ್ಯ ಟ್ರಡಿಷನಲ್ ಶೋಟೋಕಾನ್‌ಕರಾಟೆಅಕಾಡೆಮಿಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ, ಕ್ರೀಡಾಗಾಯಗಳು ಮತ್ತು ಪುನಶ್ಚೇತನದ ರಾಜ್ಯಮಟ್ಟದ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು. ಅಧಿಕಾರ, ಹಣ ಹಾಗೂ ಶ್ರೀಮಂತಿಕೆ ಶಾಶ್ವತವಲ್ಲ, ಮನುಷ್ಯನಾಗಿ ಹುಟ್ಟಿದ ಮೇಲೆ ಸಮಾಜ ಸೇವೆ ಮಾಡಬೇಕು ಎಂದರು.



ಪಟ್ಟಣದ ಎಂ.ವೈ.ಘೋರ್ಪಡೆ ಶಾಲೆಯ ನೊಬೆಲ್ ಎಜ್ಯುಕೇಶನ್ ಟ್ರಸ್ಟ್‌ನ ಆಡಳಿತಾಧಿಕಾರಿ ಹಫೀಜ್ ಶೇಖ್ ಪಾಲ್ಗೊಂಡು ಮಾತನಾಡಿ, ಪಟ್ಟಣದಲ್ಲಿ ಅನೇಕ ಕಾರ್ಯಗಾರಗಳು ನಡೆಯುತ್ತಿವೆ, ಅವುಗಳಿಂದ ಸಾರ್ವಜನಿಕರು ಸದುಪಯೋಗ ಪಡೆಯಬೇಕು. ನಮ್ಮ ರಾಜ್ಯದಲ್ಲಿ ನಮ್ಮ ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಪ್ರೋತ್ಸಹ ಸಿಗುತ್ತಿಲ್ಲ. ನಮ್ಮ ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳು, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪಾಲ್ಗೊಳ್ಳುತ್ತಿರುವುದು ಒಂದು ಸಹಾಸವೇ ಆಗಿದೆ. ನಗರ ಪ್ರದೇಶಗಳಲ್ಲಿ ನೀಡುವಂತಹ ಪ್ರೋತ್ಸಾಹದ ಜೊತೆಗೆ ಕ್ರೀಡೆಗಳಿಗೆ ಸಹಾಯವಾಗುವಂತೆ ಸರ್ಕಾರದಿಂದ ಆರ್ಥಿಕ ಸಹಾಯ ದೊರೆಯಬೇಕು ಎಂದು ಒತ್ತಾಯಿಸಿದರು.

ಮಂಗಳೂರು ವಿಶ್ವ ವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ ಜೆರಾಲ್ಡ್ ಸಂತೋಷ ಡಿಸೋಜ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಕ್ರೀಡೆಯಲ್ಲಿ ಯಾವ ಭಾಗದ ಗಾಯಗಳಿಗೆ ಯಾವ ಚಿಕಿತ್ಸೆ ಸೂಕ್ತ, ಇನ್ನು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗಾಗುವ ಕ್ರೀಡಾ ಗಾಯ, ಕರಾಟೆ ಸೇರಿದಂತೆ ಇನ್ನಿತರೆ ಕ್ರೀಡೆಗಳಲ್ಲಿ ಸಂಭವಿಸುವ ಗಾಯಗಳನ್ನು ಯಾವ ರೀತಿಯಾಗಿ ಸರಿಪಡಿಸುವ ಕುರಿತು ತರಬೇತಿ ನೀಡಿದರು.

ಟ್ರಸ್ಟ್‌ನ ಅಧ್ಯಕ್ಷ ಕನ್ನಿಹಳ್ಳಿ ಚಂದ್ರಶೇಖರ್, ಟ್ರೆಡಿಷನಲ್ ಶೋಟೋಕಾನ್ ಕಾರಾಟೆ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಕಟ್ಟೆಸ್ವಾಮಿ ಮಾತನಾಡಿದರು, ನಂದೀಪುರದ ಡಾ. ಮಹೇಶ್ವರ ಸ್ವಾಮಿಗಳು, ಹಾಲಸ್ವಾಮಿ ಮಠದ ಹಾಲಸಿದ್ದೇಶ್ವರ ಸ್ವಾಮಿಗಳು ಸಾನ್ನಿಧ್ಯವಹಿಸಿ ಮಾತನಾಡಿದರು.

ಈ ಸಂಧರ್ಭದಲ್ಲಿ ಅಂಧ್ರ ಪ್ರದೇಶದ ಹೊಸಳ್ಳಿ ಶಂಭುಲಿಂಗ ಶಿವಾಚಾರ್ಯ ಸ್ವಾಮಿಗಳ, ದೈಹಿಕ ಪರಿವೀಕ್ಷಕ ಕೊಟ್ರೇಶ್, ಹಾವೇರಿಯ ಮರಿಸ್ವಾಮಿ, ಉಜ್ಜನಿ ಕೊಪ್ಪದ ಪ್ರಕಾಶ್ ಸೇರಿದಂತೆ ಟ್ರಸ್ಟ್‌ನ ಪದಾಧಿಕಾರಿಗಳು ಸದಸ್ಯರು ಇದ್ದರು. ತರಬೇತುದಾರ ಸುಭಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ.ಎಂ.ಶಿವಶಂಕರ ಸ್ವಾಮಿ ಹಾಗೂ ಗವಿಸಿದ್ದಪ್ಪ ನಿರ್ವಹಿಸಿದರು.

# ಕೋರಿಕೆ ಸಲ್ಲಿಸಿ ಪರಿಹಾರ ಕಂಡುಕೊಳ್ಳಿ

## ಬಳ್ಳಾರಿ ಜನತಾ ದರ್ಶನದಲ್ಲಿ ಡಿಸಿ ಹೇಳಿಕೆ | ಅಹವಾಲು ಸ್ವೀಕಾರ



■ **ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವಜನಿಕರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಅಲೆದಾಡಿ ಪರಿಹಾರ ಸಿಗದೇ, ತ್ವರಿತ ಪರಿಹಾರಕ್ಕಾಗಿ ರಾಜ್ಯ ಸರ್ಕಾರ ರೂಪಿಸಿರುವ ಜನಸ್ಪಂದನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಅಹವಾಲುಗಳಿದ್ದಲ್ಲಿ ಸಲ್ಲಿಸಿ, ಪರಿಹಾರ ಕಂಡುಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದಲ್ಲಿನ ತಹಶೀಲ್ದಾರ ಕಚೇರಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಜನತಾ ದರ್ಶನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರದ ನಿರ್ದೇಶನದಂತೆ ಜನತಾ ದರ್ಶನ ಕಾರ್ಯಕ್ರಮವನ್ನು ಜಿಲ್ಲಾಡಳಿತ ಹಮ್ಮಿಕೊಳ್ಳುತ್ತಿದ್ದು, ಸಮಸ್ಯೆಗಳನ್ನು ಆಲಿಸಿ, ಪರಿಶೀಲಿಸಿ ಪರಿಹಾರ ನೀಡಲಾಗುತ್ತಿದೆ. ಸಮಸ್ಯೆಗಳಿರುವ ಸಾರ್ವಜನಿಕರು ಜನತಾ ದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಅಹವಾಲುಗಳನ್ನು ಸಲ್ಲಿಸಿ, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಮಸ್ಯೆಗಳ ಅಹವಾಲುಗಳನ್ನು ಸ್ವೀಕರಿಸಿ, ಕೂಲಂಕುಶವಾಗಿ ಪರಿಶೀಲಿಸಿ, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಡನೆ ಚರ್ಚಿಸಿ, ತ್ವರಿತವಾಗಿ ಪರಿಹಾರ ನೀಡಲಾಗುವುದು ಎಂದು ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು, ಉತ್ಸುಕರಾಗಿಯೇ ಸಾರ್ವಜನಿಕ ಅಹವಾಲು ಸ್ವೀಕಾರ ಮಾಡಿದರು. ಕೆಲ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಸ್ಪಂದಿಸಿ ಪರಿಹಾರ ನೀಡಲು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

**ಒಟ್ಟು 27 ಅರ್ಜಿ ಸಲ್ಲಿಕೆ:**

ನೂತನ ಜಿಲ್ಲಾಡಳಿತ ಭವನದ ತಾಲ್ಲೂಕು ಕಚೇರಿಯ ಸಭಾಂಗಣದಲ್ಲಿ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ, ಸಾರ್ವಜನಿಕರಿಂದ ಒಟ್ಟು 27 ಅರ್ಜಿಗಳು ಸ್ವೀಕೃತಗೊಂಡವು.

ಕಂದಾಯ ಇಲಾಖೆ 17, ಭೂ ಮಾಪನ ಇಲಾಖೆ 03, ಬಳ್ಳಾರಿ ಮಹಾನಗರ ಪಾಲಿಕೆ 02, ಜಿಲ್ಲಾ ಪಂಚಾಯತಿ 03, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಉಪವಿಭಾಗ 01, ತಾಲ್ಲೂಕು ಪಂಚಾಯಿತಿ 01 ಸೇರಿದಂತೆ ಒಟ್ಟು 27 ಅರ್ಜಿ ಸ್ವೀಕಾರಗೊಂಡವು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಉಪವಿಭಾಗಾಧಿಕಾರಿ ಹೇಮಂತ್, ಎಎಸ್‌ಪಿ ನವೀನ್ ಕುಮಾರ್, ತಹಶೀಲ್ದಾರ ಗುರುರಾಜ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಬಳ್ಳಾರಿ–ಹುಬ್ಬಳ್ಳಿಮಾರ್ಗದಲ್ಲಿ ರಾಜಹಂಸ ಸಾರಿಗೆ ಪ್ರಾರಂಭ

■ **ಹಂಪಿ ಟೈಮ್ಸ್ ಬಳ್ಳಾರಿ**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗ ವತಿಯಿಂದ ಬಳ್ಳಾರಿಯಿಂದ ಹುಬ್ಬಳ್ಳಿಗೆ ಜೂ.27 ರಿಂದ 2 ರಾಜಹಂಸ ಸಾರಿಗೆ ಬಸ್ ಕಾರ್ಯಾಚರಣೆ ಪ್ರಾರಂಭಿಸಲಾಗುತ್ತಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಇನಾಯತ್ ಬಾಗ್‌ಬಾನ್ ಅವರು ತಿಳಿಸಿದ್ದಾರೆ.

ಬಳ್ಳಾರಿ–ಹುಬ್ಬಳ್ಳಿ ವಯಾ ತೋರಣಗಲ್ಲು, ಹೊಸಪೇಟೆ, ಕೊಪ್ಪಳ, ಗದಗ ಮಾರ್ಗದಲ್ಲಿ ಸೀಮಿತ ನಿಲುಗಡೆ ಕಲ್ಪಿಸಲಾಗಿದೆ.

**ಬಸ್ ಸಂಚರಿಸುವ ವೇಳೆ:** ಬಳ್ಳಾರಿಯಿಂದ ಬೆಳಿಗ್ಗೆ 5.30 ಮತ್ತು 07 ಗಂಟೆಗೆ ಹೊರಟು, ಹುಬ್ಬಳ್ಳಿಗೆ ಬೆಳಿಗ್ಗೆ 10.30 ಮತ್ತು ಮಧ್ಯಾಹ್ನ 12 ಗಂಟೆಗೆ ತಲುಪಲಿದೆ. ಹುಬ್ಬಳ್ಳಿಯಿಂದ ಬೆಳಿಗ್ಗೆ 11 ಮತ್ತು 01 ಗಂಟೆಗೆ ಹೊರಟು, ಬಳ್ಳಾರಿಗೆ ಸಂಜೆ 04 ಮತ್ತು 06 ಗಂಟೆಗೆ ತಲುಪಲಿದೆ. ಟಿಕೆಟ್ ದರ ರೂ.430 ಇರಲಿದೆ. ಮುಂಗಡ ಆಸನಗಳನ್ನು ಕಾಯ್ದಿರಿಸಲು www.ksrtc.in ಗೆ ಭೇಟಿ ನೀಡಬಹುದು. ರಾಜಹಂಸ ಸಾರಿಗೆ ಸೇವೆಯನ್ನು ಸಾರ್ವಜನಿಕ ಪ್ರಯಾಣಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಂಗಾರದ ಆಭರಣ ಕದ್ದ ಅಪರಾಧಿಗೆ ಜೈಲು ಶಿಕ್ಷೆ

■ **ಹಂಪಿ ಟೈಮ್ಸ್ ಕೊಪ್ಪಳ**

ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಗಂಗಾವತಿ ತಾಲೂಕಿನ ಉಪ್ಪನಮಳ್ಳಿ ಕ್ಯಾಂಪ್‌ನ ಪ್ರತಾಪ ತಂದೆ ಹುಲಗಪ್ಪ ಮುಚಿಗೇರ ಎಂಬ ಅಪರಾಧಿಗೆ ಕೊಪ್ಪಳ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳಾದ ಮಹಾಂತೇಶ ದುರ್ಗದ ಅವರು 02 ವರ್ಷಗಳ ಜೈಲು ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ.

ದಿನಾಂಕ: 18–10–2023 ರಂದು ಬೆಳಿಗ್ಗೆ 11–15 ಗಂಟೆ ಸುಮಾರಿಗೆ ಕೊಪ್ಪಳ ನಗರದ ಸಿದ್ದೇಶ್ವರ ಓಣಿಯಲ್ಲಿ ವಾಸ ಮಾಡುತ್ತಿರುವ ಫಿರ್ಯಾದಿದಾರ ಶರಣಯ್ಯ ತಂದೆ ಕಲ್ಲಯ್ಯ ಶಶಿಮಠ ಇವರ ಮನೆಯೊಳಗೆ ಪ್ರವೇಶ ಮಾಡಿ ಅಲಮಾರವನ್ನು ಕಬ್ಬಿಣದ ರಾಡಿನಿಂದ ತೆರೆದು ಅಲಮಾರದಲ್ಲಿದ್ದ 24 ಗ್ರಾಂ ತೂಕದ ಬಂಗಾರದ ಆಭರಣಗಳನ್ನು ಕಳುವು ಮಾಡಿರುವ ಬಗ್ಗೆ ತನಿಖೆಯಲ್ಲಿ ಆರೋಪಿತನ ವಿರುದ್ಧ ಕಳ್ಳತನ ಅಪರಾಧ ಸಾಭೀತಾಗಿದ್ದರಿಂದ ಕೊಪ್ಪಳ ನಗರ ಪೋಲಿಸ್ ಠಾಣೆಯ ಪಿಎಸ್‌ಐ ಶರಣಪ್ಪ ಕಟ್ಟಿಮನಿ ರವರು ಆರೋಪ ಪಟ್ಟಿಯನ್ನು ಸಲ್ಲಿಸಿದ್ದರು.

ಪ್ರಕರಣದಲ್ಲಿ ಗಂಗಾವತಿ ತಾಲೂಕಿನ ಉಪ್ಪನಮಳ್ಳಿ ಕ್ಯಾಂಪ್‌ನ ಅಪರಾಧಿ ಪ್ರತಾಪ ತಂದೆ ಹುಲಗಪ್ಪ ಮುಚಿಗೇರ ಇತನ ಮೇಲಿರುವ ಕಳ್ಳತನದ ಆರೋಪಗಳು ಸಾಭೀತಾಗಿವೆ ಜೂನ್ 24 ರಂದು ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಅಪರಾಧಿಗೆ 02 ವರ್ಷ ಜೈಲು ಶಿಕ್ಷೆ ವಿಧಿಸಿದ್ದಾರೆ. ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಾದ ವಸಂತ ಅವರು ಪ್ರಕರಣ ನಡೆಸಿ ವಾದ ಮಂಡಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.

# ಮಾದಕ ವಸ್ತು ಸೇವನೆ, ಸಾಗಿಸುವ ಅಪರಾಧಿಗಳಿಗೆ ಕಾನೂನಿನಡಿ ಕಠಿಣ ಶಿಕ್ಷೆ

## ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಹೊಸಮನೆ ಎಚ್ಚರಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಇತ್ತೀಚಿನ ದಿನಗಳಲ್ಲಿ ಯುವಜನತೆ ಮಾದಕ ವಸ್ತು ಸೇವನೆ ಮಾಡುವ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿದ್ದು, ಇದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಅತ್ಯಂತ ದುಷ್ಪರಿಣಾಮ ಬೀರುತ್ತದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಹೊಸಮನೆ ಅವರು ಹೇಳಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಆಸ್ಪತ್ರೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ವಕೀಲರ ಸಂಘ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ ಇವರ ಸಂಯುಕ್ತಾಶ್ರಯದಲ್ಲಿ "ಸಾಕ್ಷಿಗಳು ಸ್ಪಷ್ಟವಾಗಿವೆ ತಡೆಗಟ್ಟುವ ಬಗ್ಗೆ ಗಮನವಹಿಸಿ" ಎಂಬ ಧ್ಯೇಯವಾಕ್ಯದೊಂದಿಗೆ ನಗರದ ಬಳ್ಳಾರಿ ಇನ್ಸ್‌ಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್ಮೆಂಟ್ ಕಾಲೇಜು ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಹಾಗೂ ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಾದಕ ವಸ್ತುಗಳು ವಿವಿಧ ರೂಪದಲ್ಲಿ ದೊರೆಯುತ್ತಿದ್ದು, ಹೊರ ದೇಶಗಳಿಂದಲು ಕಳ್ಳ ಸಾಗಣೆಯಾಗುತ್ತಿದೆ. ಇದರ ಸೇವನೆ ಹಾಗೂ ಕಳ್ಳ ಸಾಗಣೆ ಮಾಡುವುದು ಅಪರಾಧವಾಗಿದ್ದು, ಈ ಅಪರಾಧದಲ್ಲಿ ಪಾಲ್ಗೊಂಡರೆ ಕಾನೂನಿನಡಿ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಪಠ್ಯಕ್ರಮ ವಿದ್ಯಾಭ್ಯಾಸದ ಜೊತೆಗೆ ಮಾನಸಿಕ ಆರೋಗ್ಯವು ಕಾಪಾಡಿಕೊಳ್ಳುವುದು ತುಂಬಾ ಮುಖ್ಯವಾಗಿದ್ದು, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಶಿಸ್ತಿನ ಜೀವನ ಹಾಗೂ ಆರೋಗ್ಯಕರ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಮಾದಕ ವಸ್ತುಗಳ ಬಗ್ಗೆ ಇರುವ ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೊಪಿಕ್ ಸಬ್ಸ್ಟೆನ್ಸ್ ಆಕ್ಟ್ (ಎನ್‌ಡಿಪಿಎಸ್ ಆಕ್ಟ್ 1985) ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿವಳಿಕೆ ಮೂಡಿಸಿದರು. ಮಾದಕ ವಸ್ತುಗಳ ಸೇವನೆಯಿಂದ ಆಗುವ ಅನಾಹುತಗಳ ಬಗ್ಗೆ ಎಚ್ಚರಿಕೆ ನೀಡಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗದ ಮನೋರೋಗ ತಜ್ಞ ಡಾ.ರೋಹನ್ ವನಗುಂದಿ ಅವರು ಕಾರ್ಯಕ್ರಮ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ ಬಾಬು, ಬಿಐಟಿಎಂ ಕಾಲೇಜಿನ ಪ್ರಾಂಶುಪಾಲರಾದ ಯಡವಳ್ಳಿ ಬಸವರಾಜ್, ಜಿಲ್ಲಾಮಾನಸಿಕಆರೋಗ್ಯಕಾರ್ಯಕ್ರಮಾಧಿಕಾರಿ ಡಾ.ವೀರೇಂದ್ರ ಕುಮಾರ್, ಉಪ ಪೋಲಿಸ್ ವರಿಷ್ಠಾಧಿಕಾರಿ ವೆಂಕಟೇಶ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಪೂರ್ಣಿಮಾ ಎಸ್ ಕಟ್ಟಿಮನಿ, ಜಿಲ್ಲಾ ಕ್ಷಯರೋಗ ನಿಯಾಂತ್ರಣಾಧಿಕಾರಿ ಡಾ.ಇಂದ್ರಾಣಿ ವಿ., ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ.ಈಶ್ವರ್ ದಾಸಪ್ಪನವರ್, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗದ ಸಿಬ್ಬಂದಿಗಳಾದ ಶರ್ಮಸ್ ವಲಿ.ಪಿ., ಶಾಂತಕುಮಾರ್.ಹೆಚ್., ರಂಜಿತ.ಜಿ., ಸಾಹೇರ ಬಾನು, ನಿರಂಜನ, ರಮೇಶ್ ಬಾಬು ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಕನಕಗಿರಿ ಜನತಾ ದರ್ಶನದಲ್ಲಿ 249 ಅರ್ಜಿಗಳು ಸ್ವೀಕಾರ

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾಧಿಕಾರಿಗಳಾದ ನಲೀನ್ ಅತುಲ್ ಅವರು ಜೂನ್ 26ರಂದು ಕನಕಗಿರಿ ತಾಲೂಕಿಗೆ ಭೇಟಿ ನೀಡಿ ಜನಸ್ಪಂದನ ಕಾರ್ಯಕ್ರಮದಡಿ ಸಾರ್ವಜನಿಕರ ಅಹವಾಲು ಆಲಿಸಿದರು.

ನಗರದ ಎ.ಪಿ.ಎಂ.ಸಿ. ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆಗೆ ಅತೀ ಹೆಚ್ಚು 90 ಅರ್ಜಿಗಳು ಸ್ವೀಕೃತವಾದವು. ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಇಲಾಖೆಗೆ 40, ನಗರಾಭಿವೃದ್ಧಿ ಇಲಾಖೆಗೆ 36, ಶಾಲಾ ಶಿಕ್ಷಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗೆ ತಲಾ 15, ಇಂಧನ ಇಲಾಖೆಗೆ 9, ಸಾರಿಗೆ ಇಲಾಖೆಗೆ 8, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 7, ಆರೊಗ್ಯ ಇಲಾಖೆಗೆ 5, ಆಹಾರ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗೆ ತಲಾ 4, ಕೃಷಿ ಇಲಾಖೆ ಮತ್ತು ಪಶುಪಾಲನಾ ಇಲಾಖೆಗೆ ತಲಾ 3, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ತಲಾ 2, ಅರಣ್ಯ ಇಲಾಖೆ, ಉನ್ನತ ಶಿಕ್ಷಣ, ಪೊಲೀಸ್ ಇಲಾಖೆ, ತೋಟಗಾರಿಕಾ ಇಲಾಖೆ, ವಸತಿ ಇಲಾಖೆ ಮತ್ತು ಕೌಶಲಾಭಿವೃದ್ಧಿ ಇಲಾಖೆಗೆ ತಲಾ 1 ಸೇರಿ ಜನತಾ ದರ್ಶನದಲ್ಲಿ ಒಟ್ಟು 249 ಅರ್ಜಿಗಳು ಸ್ವೀಕೃತವಾದವು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರಾಹುಲ್ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳು ಬೆಳಗ್ಗೆಯಿಂದ ಸಂಜೆವರೆಗೂ ಅಹವಾಲು ಆಲಿಸಿ ಸಾರ್ವಜನಿಕರ ಅರ್ಜಿಗಳನ್ನು ಪರಿಶೀಲಿಸಿದರು.

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**27–06–2024 – ಗುರುವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶತಭಿಷ |
| ಯೋಗ | : ಆಯುಷ್ಮಾನ್ |
| ಕರಣ | : ಗರಜ |
| ಸೂರ್ಯೋದಯ | : 05:44:52 |
| ಸೂರ್ಯಾಸ್ತ | : 19:15:19 |
| ರಾಹು | : 14:11–15:53 |
| ಯಮಘಂಡ | : 05:45–07:26 |
| ಗುಳಿಕ | : 09:07–10:49 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 26–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.29 ಅಡಿ |
| ಒಳ ಹರಿವು | 604 ಕ್ಯುಸೆಕ್ |
| ಹೊರ ಹರಿವು | 1995 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.132 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.12 ಅಡಿ |
| ಒಳ ಹರಿವು | 228 ಕ್ಯುಸೆಕ್ |
| ಹೊರ ಹರಿವು | 1328 ಕ್ಯುಸೆಕ್ |
| ಸಾಮರ್ಥ್ಯ | 4.057ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
Follow for vijayanagara dist. updates

# ಜಿಲ್ಲಾ ಮಣ್ಣು ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ

## ರೈತರು ಜನರ ಜೀವನಾಡಿ : ಶಾಸಕ ಎಚ್.ಆರ್.ಗವಿಯಪ್ಪ






■ **ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆಯ ಎ.ಪಿ.ಎಂ.ಸಿ ಯಾರ್ಡ್‌ನಲ್ಲಿರುವ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಆವರಣದಲ್ಲಿ ಕೃಷಿ ಇಲಾಖೆಯಿಂದ 15 ಲಕ್ಷ ರೂಗಳ ಜಿಲ್ಲಾ ಮಣ್ಣು ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಶಾಸಕರಾದ ಹೆಚ್.ಆರ್.ಗವಿಯಪ್ಪ ಅವರು ಜೂನ್ 26ರಂದು ಭೂಮಿ ಪೂಜೆಯನ್ನು ನೆರವೇರಿಸಿದರು.

ಇದೆ ವೇಳೆ ಶಾಸಕರು, 2024–25ನೇ ಸಾಲಿನ ಕೃಷಿ ಇಲಾಖೆಯ ಯೋಜನೆಯಡಿ ರೈತರಿಗೆ ಪರಿಕರ ಮತ್ತು ಬಿತ್ತನೆ ಬೀಜಗಳನ್ನು ವಿತರಣೆ ಮಾಡಿದರು.

ಈ ವೇಳೆ ಮಾತನಾಡಿದ ಶಾಸಕರು, ರೈತರು ನಮ್ಮ ಜೀವನಾಡಿಯಾಗಿದ್ದಾರೆ. ಉತ್ತಮ ಕೃಷಿಗೆ ಮಣ್ಣು ಅವಶ್ಯವಿದ್ದು, ಮಣ್ಣಿನ ಪರೀಕ್ಷೆ ಮತ್ತು ಮಣ್ಣಿನ ಬಗ್ಗೆ ಸಾಕಷ್ಟು ಮಾಹಿತಿ ಅರಿತು ರೈತರು ಉತ್ತಮ ಕೃಷಿ ಮಾಡಲು ಅನುಕೂಲವಾಗುವ ನಿಟ್ಟಿನಲ್ಲಿ ಜಿಲ್ಲಾ ಮಣ್ಣು ಆರೋಗ್ಯ ಕೇಂದ್ರದ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರೈತರು, ಮುಖಂಡರುಗಳು, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಶರಣಪ್ಪ ಮುದಗಲ್ ಹಾಗೂ ಇನ್ನಿತರರು ಇದ್ದರು.

# ಕಡಲಬಾಳು ಗ್ರಾ.ಪಂ.ಅಧ್ಯಕ್ಷರಾಗಿ ಲತಾ ಅವಿರೋಧ ಆಯ್ಕೆ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಕ್ಷೇತ್ರದ ಶಾಸಕ ಕೆ.ನೇಮಿರಾಜ್‌ನಾಯ್ಕ್ ಅವರ ಬೆಂಬಲಿಗರಾದ ಲತಾ ರಾಜ್‌ಕುಮಾರ್‌ರವರು ತಾಲೂಕಿನ ಕಡಲಬಾಳು ಗ್ರಾ.ಪಂ.ಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾ.ಪಂ.ಯ ಎರಡನೇ ಅವಧಿಗೆ ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳಾ ಮೀಸಲಾತಿಯಾದ ಹಿನ್ನಲೆಯಲ್ಲಿ, ಕಳೆದ 10ತಿಂಗಳಗಳ ಕಾಲ ಅಧ್ಯಕ್ಷರಾಗಿದ್ದ ಎಂ.ಎಂ.ಅನ್ನಪೂರ್ಣಮ್ಮ ರುದ್ರಯ್ಯ ಒಡಂಬಡಿಕೆಯಂತೆ ರಾಜೀನಾಮೆ ನೀಡಲಾಗಿತ್ತು. ತೆರವಾದ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯ ಹಿನ್ನೆಲೆಯಲ್ಲಿ, ಗ್ರಾ.ಪಂ.ವ್ಯಾಪ್ತಿಯ ಆನಂದ ದೇವನಹಳ್ಳಿಯ ಲತಾ ರಾಜ್‌ಕುಮಾರ್ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಇವರ ನಾಮಪತ್ರ ಅಂಗಿಕರಿಸಿ, ಚುನಾವಣಾಧಿಕಾರಿಯಾಗಿ ನಿರ್ವಹಿಸಿದ ತಹಸೀಲ್ದಾರ್ ಚಂದ್ರಶೇಖರ್ ಶಂಭಣ್ಣಗಾಳಿ ಅಧ್ಯಕ್ಷರ ಆಯ್ಕೆ ಘೋಷಿಸಿದರು.

ಬಳಿಕ ಗ್ರಾಮದ ಯುವ ಮುಖಂಡ ಬ್ಯಾಟಿ ನಾಗರಾಜ್ ಮಾತನಾಡಿ, ಗ್ರಾ.ಪಂ.ಯ ವ್ಯಾಪ್ತಿಯ 5ಗ್ರಾಮಗಳ ಸರ್ವೋತಮುಖ ಅಭಿವೃದ್ಧಿಯ ಕಾರಣ ಗ್ರಾ.ಪಂ.ಯ ಅಧಿಕಾರಕ್ಕೆ ಪ್ರತಿಯೊಬ್ಬರ ಸಹಕಾರವಿದೆ. ಅಲ್ಲದೆ, ಕ್ಷೇತ್ರದ ಶಾಸಕರಾದ ಕೆ.ನೇಮಿರಾಜ್‌ನಾಯ್ಕ್ ವಿಶೇಷವಾಗಿ ಗ್ರಾ.ಪಂ.ಯ ಮೇಲೆ ಅಪಾರವಾದ ಅಭಿಮಾನವನ್ನಿಟ್ಟಿದ್ದು, ಇಂದು ಸಹ ಅವರ ಬೆಂಬಲಿಗರನ್ನೇ ಅಧ್ಯಕ್ಷರನ್ನಾಗಿ ಆಯ್ಕೆಮಾಡಿಕೊಳ್ಳಲಾಗಿದೆ. ಸಹಕರಿಸಿದ ಪ್ರತಿಯೊಬ್ಬರಿಗೂ ಅಭಿನಂದಿಸುತ್ತಾ, ಗ್ರಾ.ಪಂ.ವ್ಯಾಪ್ತಿಯ ಸಾರ್ವಜನಿಕರ ಕೆಲಸಗಳಿಗೆ ಒತ್ತು ನೀಡಬೇಕು ಎಂದು ಅಧ್ಯಕ್ಷರಿಗೆ ಮನವಿಮಾಡುತ್ತಾ ಶುಭಹಾರೈಸಿದರು.

ಈ ವೇಳೆ ಗ್ರಾ.ಪಂ.ಯ ಉಪಾಧ್ಯಕ್ಷರಾದ ಛಲವಾದಿ ಶಾಂತ ನಾಗರಾಜ್, ಸದಸ್ಯರಾದ ಎಂ.ಎಂ.ಅನ್ನಪೂರ್ಣಮ್ಮ ರುದ್ರಯ್ಯ, ಎಂ.ಸುನಿತಾ ಜ್ಞಾನೇಶ, ಬ್ಯಾಟಿ ಅನ್ನಪೂರ್ಣಮ್ಮ ರಾಮಪ್ಪ, ಎಚ್.ದೊಡ್ಡಬಸಪ್ಪ, ಸಿ.ರಮೇಶ, ಕೆ.ಸಂತೋಷ, ಓ.ವಿರುಪಣ್ಣ, ಡಿ.ಹುಲುಗಪ್ಪ, ಮುಖಂಡರಾದ ಕೊಟ್ರಗೌಡ, ಬಿ.ಮಂಜುನಾಥಗೌಡ, ಟಿ.ಎಂ.ಶರಣಯ್ಯ, ಶಂಕರ್‌ಬಾಬು, ಕಾತ್ರಿಕಿ ಮುತ್ತಪ್ಪ, ಎಂ.ಜ್ಞಾನೇಶ, ಜಾಲಿ ಅಶೋಕ, ನಿವೃತ್ತ ಶಿಕ್ಷಕ ಮಲ್ಲಿಕಾರ್ಜುನ, ಪಂಪಾಪತಿ, ಯುವ ಮುಖಂಡರಾದ ವಿ.ಎಂ.ಗವಿಸಿದ್ದಪ್ಪ, ಎಸ್.ಕೆ.ವಿರುಪಾಕ್ಷ, ಡಿ.ಗೋಣೆಪ್ಪ, ಸಿ.ಸಕ್ರಪ್ಪ, ಎಸ್.ಕೆ.ಕೊಟ್ರೇಶ, ಎಂ.ಎಂ.ಶಾಂತವೀರಸ್ವಾಮಿ, ಬಿ.ಕಡ್ಲಪ್ಪ, ಎಂ.ಕೋಟೆಪ್ಪ, ಜಿ.ಚಂದ್ರಶೇಖರ್, ಎಂ.ನಿಂಗಪ್ಪ, ಎಂ.ಮಲ್ಲಿಕಾರ್ಜುನ ಮತ್ತಿತರರು ಪಾಲ್ಗೊಂಡಿದ್ದರು. ಪಿಡಿಒ ಜಗಳೂರು ಕೊಟ್ರೇಶ ಚುನಾವಣೆ ಪ್ರಕ್ರಿಯೆಯಲ್ಲಿ ಚುನಾವಣಾಧಿಕಾರಿಗೆ ಸಹಕರಿಸಿದರು.

# ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**
ಪ್ರಸಕ್ತ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಮಮತಾ ಅವರು ತಿಳಿಸಿದ್ದಾರೆ.

ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಎರಡು ವರ್ಷಗಳ ವೃತ್ತಿ ತರಬೇತಿ ನೀಡಲಾಗುವುದು ಮತ್ತು ಶಿಷ್ಯವೇತನ ಒಳಗೊಂಡಿರುತ್ತದೆ.

ಅರ್ಹ ಪದವೀಧರರು ಜುಲೈ 31ರ ಒಳಗಾಗಿ ಇಲಾಖೆಯ ವೆಬ್‌ಸೈಟ್ ತಿತಿತಿ.ತಿ.ಇಚಿಡಿ.ಟಿಛಿ.ಟಿ ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿ, ಸಂಬಂಧಪಟ್ಟ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಅರ್ಜಿಯೊಂದಿಗೆ 2 ಸೆಟ್ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು.

ಬೇಕಾದ ದಾಖಲೆಗಳು: ಆಧಾರ್‌ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಪ್ರಮಾಣ ಪತ್ರ ಹಾಗೂ ಮೂರು ವರ್ಷಗಳ ಕಾನೂನು ಪದವಿಯ ಅಂಕಪಟ್ಟಿಗಳು, ಬಾರ್ ಕೌನ್ಸಿಲ್‌ನಲ್ಲಿ ನೋಂದಾಯಿಸಿದ ಪ್ರಮಾಣ ಪತ್ರ, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್, 4 ಭಾವಚಿತ್ರ.

ಹೆಚ್ಚಿನ ಮಾಹಿತಿಗಾಗಿ ನಗರದ ಕೌಲ್‌ಬಜಾರ್‌ನ 1ನೇ ಗೇಟ್ ರೈಲ್ವೇ ಗೇಟ್ ಹತ್ತಿರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಅಥವಾ ದೂ:08392–244738,ಮೊ.9480843073ಗೆಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೂ.27 ಜಿಲ್ಲಾ ಸಲಹಾ ಸಮಿತಿ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ :** ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣ ಲಿಂಗ ಪತ್ತೆ ತಂತ್ರ ವಿಧಾನಗಳ ಲಿಂಗ ಆಯ್ಕೆ ನಿಷೇಧ (ಪಿಸಿ ಮತ್ತು ಪಿಎನ್‌ಡಿಟಿ) ಕಾಯ್ದೆ 1994 ರ ಸಂಬಂಧ ಜೂ.27 ರಂದು ಸಂಜೆ 04 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಲ್ಲಿ ಜಿಲ್ಲಾ ಸಲಹಾ ಸಮಿತಿ ಸಭೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ತಿಳಿಸಿದ್ದಾರೆ.

## ಅರ್ಹರಿಗೆ ಸವಲತ್ತು ವಿತರಣೆ

**ಮೊದಲ ಪುಟದಿಂದ**
ಇಲಾಖೆಗಳಿಗೆ ತಲಾ 2, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ತಲಾ 1 ಅರ್ಜಿಗಳು ಸ್ವೀಕೃತವಾದವು. ಜಿಲ್ಲಾಧಿಕಾರಿಗಳು ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಅರ್ಜಿಗಳನ್ನು ಪರಿಶೀಲಿಸಿದರು.

ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಜನತಾ ದರ್ಶನದಲ್ಲಿ ಅರ್ಜಿಗಳ ಸ್ವೀಕೃತಿಗೆ ವಿವಿಧ ಇಲಾಖೆಗಳಿಂದ ಅಗತ್ಯ ವ್ಯವಸ್ಥೆ ಮಾಡಲಾಗಿತ್ತು. ಕೃಷಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಆಹಾರ ಇಲಾಖೆ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕಾ ಇಲಾಖೆ, ಜೆಸ್ಕಾಂ, ಪಂಚಾಯತ್ ರಾಜ್ಯ ಎಂಜಿನಿಯರಿಂಗ್ ಇಲಾಖೆ, ಲೋಕೋಪಯೋಗಿ ಇಲಾಖೆ, ತಾಲೂಕು ಪಂಚಾಯತ್, ಸಿಡಿಪಿಓ ಕಚೇರಿ, ಮೀನುಗಾರಿಕೆ ಇಲಾಖೆ, ಪ್ರಾದೇಶಿಕ ಸಾರಿಗೆ ಇಲಾಖೆ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆ, ಪುರಸಭೆ ಕಾರ್ಯಾಲಯ, ಸಾರಿಗೆ ಇಲಾಖೆ, ಅಬಕಾರಿ ಇಲಾಖೆ, ಪಶುಪಾಲನಾ ಇಲಾಖೆ, ಸರ್ವೆ ಇಲಾಖೆ, ಕೆಆರ್‌ಐಡಿಎಲ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಜರಿದ್ದು ಸಾರ್ವಜನಿಕರಿಂದ ಅರ್ಜಿಗಳನ್ನು ಪಡೆದುಕೊಂಡರು.

**ನಾನಾ ಸೌಲಭ್ಯ ವಿತರಣೆ:** ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ವಿವಿಧ ಯೋಜನೆಯಡಿ 37 ತ್ರಿಚಕ್ರ ವಾಹನ ವಿತರಿಸಲಾಯಿತು. 2 ಲ್ಯಾಪ್ ಟಾಪ್ , 1 ಬ್ಯಾಟರಿ ವೀಲ್ ಚೇರ್ , 2 ಬ್ರೈಲ್ ಕಿಟ್ , 1 ಹೊಲಿಗೆ ಯಂತ್ರ ಸೇರಿ ಒಟ್ಟು 49 ಫಲಾನುಭವಿಗಳಿಗೆ ಇದೆ ವೇಳೆ ಸರ್ಕಾರದ ಸವಲತ್ತು ವಿತರಿಸಲಾಯಿತು.

**ಕಾರ್ಯಕ್ರಮಗಳಿಗೆ ಚಾಲನೆ:** 1 ವರ್ಷದಿಂದ 5 ವರ್ಷದೊಳಗಿನ ಮಕ್ಕಳಿಗೆ ಜೂನ್ 26 ರಿಂದ 10 ದಿನಗಳ ಕಾಲ ವಿಟಮಿನ್ ಎ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಮತ್ತು ಕೃಷಿ ಇಲಾಖೆಯಿಂದ ರೈತರಲ್ಲಿ ಕೃಷಿ ವಿಮೆ ಬಗ್ಗೆ ಜಾಗೃತಿ ಮೂಡಿಸಲು ಸಂಚರಿಸಲಿರುವ ಜಾಗೃತಿ ವಾಹನಕ್ಕೆ ಜಿಲ್ಲಾಧಿಕಾರಿಗಳು ಚಾಲನೆ ನೀಡಿದರು.

ಜನಸ್ಪಂದನ ಕಾರ್ಯಕ್ರಮದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಮತ್ತು ಗ್ರಾಮ ಮಟ್ಟದ ಪಿಡಿಓಗಳು, ಗ್ರಾಮ ಆಡಳಿತ ಅಧಿಕಾರಿಗಳು, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ತಂತ್ರಜ್ಞಾನವು ಅರಿತುಕೊಳ್ಳಿ

## ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ: ತಾಂತ್ರಿಕ ತರಬೇತಿ ಕಾರ್ಯಕ್ರಮ




■ **ಹಂಪಿ ಟೈಮ್ಸ್ ಬಳ್ಳಾರಿ**
ಇಂಧನ ವಸ್ತುಗಳ ಬಳಕೆಯಲ್ಲಿ ಅವುಗಳ ಕಾರ್ಯ ಮತ್ತು ತಂತ್ರಜ್ಞಾನವು ಅರಿತುಕೊಳ್ಳಬೇಕು ಎಂದು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ವಿಭಾಗೀಯ ಕಚೇರಿಯ ಜಂಟಿ ನಿರ್ದೇಶಕ ರವೀಂದ್ರನಾಥ್ ಎಸ್.ಬಳ್ಳಿ ಅವರು ಹೇಳಿದರು.

ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಬ್ಯೂರೋ ಆಫ್ ಎನರ್ಜಿ ಎಫಿಶಿಎನ್ಸಿ ಮತ್ತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಸಂಯುಕ್ತಾಶ್ರಯದಲ್ಲಿ ಪಂಪ್, ಉಪಕರಣ ತಂತ್ರಜ್ಞರಿಗೆ ಇಂಧನ ದಕ್ಷತಾ ಕಾರ್ಯಗಾರ ಕುರಿತು ಸೋಮವಾರ ಏರ್ಪಡಿಸಿದ್ದ ಒಂದು ದಿನದ ತಾಂತ್ರಿಕ ತರಬೇತಿ ಕಾರ್ಯಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾರ್ಯಾಗಾರದ ಉಪಯೋಗ ಪಡೆದು, ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಬೇಕು ಎಂದರು.

ಇದೇ ವೇಳೆ ತರಬೇತುದಾರರಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಸರ್ಕಾರಿ ಕೈಗಾರಿಕಾ ಸಂಸ್ಥೆಯ ಪ್ರಾಚಾರ್ಯ ಕೆ.ಹೆಚ್.ಎಂ.ಪಂಡಿತಾರಾಧ್ಯ, ತರಬೇತಿ ಅಧಿಕಾರಿಗಳಾದ ಎಸ್.ಎ.ಬಿರಾದರ್, ಮಹಮ್ಮದ್ ಜುನೇದ್, ಕಿರಿಯ ತರಬೇತಿ ಅಧಿಕಾರಿಗಳಾದ ವೆಂಕಟೇಶ.ಟಿ, ಚಂದ್ರಶೇಖರ ರೆಡ್ಡಿ, ಗೊಂವಿದಪ್ಪ, ಟಿ.ಚೆನ್ನಬಸವ, ಶ್ರೀನಿವಾಸುಲು, ಹೆಚ್.ಎಂ.ಇಂದಿರ, ಹೆಚ್.ಚಂದ್ರಿಕ ಸೇರಿದಂತೆ 120 ತರಬೇತಿದಾರರು ಹಾಗೂ ಹಾಜರಿದ್ದರು.

## ಬೆಳಕಿನ ಹಾದಿ

# ಚಿಟ್ಟೆಗಳನ್ನು ಬೆನ್ನಟ್ಟಬೇಡಿ

■ ಆರ್.ಬಿ.ಗುರುಬಸವರಾಜ



ಒಂದು ದಿನ ಅಜ್ಜ ಮತ್ತು ಮೊಮ್ಮಗ ತೋಟದ ಮನೆಯ ಬಳಿ ಕುಳಿತಿದ್ದರು. ಪರಸ್ಪರ ಮಾತಾಡುತ್ತಾ ಕುಳಿತಿರುವಾಗ ಮೊಮ್ಮಗ ಅಜ್ಜನನ್ನು ಕೇಳಿದ. "ಅಜ್ಜ, ನಾನು ದೊಡ್ಡ ಸ್ಟಾರ್ ಆಗಬೇಕೆಂದು ಬಯಸಿದ್ದೇನೆ. ನಾನು ದೊಡ್ಡವನಾದಾಗ ನನ್ನದೇ ಆದ ಹೊಸ ಜಗತ್ತನ್ನು ಸೃಷ್ಟಿಸಬೇಕೆಂದಿರುವೆ. ಓಡಾಡಲು ಬೆಲೆಬಾಳುವ ಕಾರುಗಳು, ವಾಸಿಸಲು ಭವ್ಯವಾದ ಗಾಜಿನ ಮನೆಗಳು, ಕೆಲಸಕ್ಕೆ ಕೈ ತುಂಬಾ ಆಳುಗಳು ಹೀಗೆ ಒಟ್ಟಾರೆ ವಿಭಿನ್ನ ಜೀವನ ನಡೆಸಬೇಕೆಂದಿರುವೆ. ಜೀವನದಲ್ಲಿ ಯಶಸ್ವಿಯಾಗಬೇಕೆಂದಿರುವೆ. ನನ್ನ ಎಲ್ಲಾ ಗುರಿಗಳನ್ನು ಬೆನ್ನಟ್ಟುವುದು ಹೇಗೆ? ಯಶಸ್ಸನ್ನು ಬೇಗನೆ ಸಂಪಾದಿಸುವುದು ಹೇಗೆ?" ಎಂದನು.

ಅಜ್ಜ ಮೊಮ್ಮಗನ ಮಾತುಗಳನ್ನು ಯೋಚಿಸುತ್ತಾ ಕುಳಿತ. ಇಷ್ಟು ವಯಸ್ಸಿಗೆ ಎಂತಹ ಯೋಚನೆ ಬಂದಿದೆಯಲ್ಲ ಎಂದು ಖುಷಿಪಟ್ಟ. ಹಾಗೆ ಯೋಚಿಸುತ್ತಿರುವಾಗ ಅಲ್ಲಿಯೇ ಇದ್ದ ಹೂವಿನ ಗಿಡದಲ್ಲಿ ಸುಂದರವಾದ ಚಿಟ್ಟೆಗಳು ಹಾರಾಡುತ್ತಿತ್ತು. ಅದನ್ನು ನೋಡಿದ ಅಜ್ಜ ಮೊಮ್ಮಗನಿಗೆ ಹೇಳಿದರು. 'ಏಯ್, ನೋಡಲ್ಲಿ! ಸುಂದರವಾದ ಚಿಟ್ಟೆಗಳು. ಅವು ಗಿಡದಲ್ಲಿ ಯದ್ವಾತದ್ವಾ ಹಾರಾಡುತ್ತಿವೆ. ಅವುಗಳಿಗೆ ನಿರ್ದಿಷ್ಟ ದಾರಿಯೆಂಬುದು ಇಲ್ಲ. ನೀನು ಹೋಗಿ ಒಂದು ಚಿಟ್ಟೆಯನ್ನು ಹಿಡಿದುಕೊಂಡು ಬಾ. ಬೇಗ ಓಡು' ಎಂದು ಮೊಮ್ಮಗನನ್ನು ಹುರಿದುಂಬಿಸಿ ಚಿಟ್ಟೆ ಹಿಡಿಯಲು ಕಳಿಸಿದರು.



ಮೊಮ್ಮಗ ಚಿಟ್ಟೆಗಳ ಬಳಿ ವೇಗವಾಗಿ ಓಡಿದ. ಇವನು ಓಡಿದ ರಭಸಕ್ಕೆ ಚಿಟ್ಟೆಗಳು ಅಲ್ಲಿಂದ ಹಾರಿ ಹೋದವು. ಅವನು ಅವುಗಳ ಹಿಂದೆ ಹಿಂದೆ ಓಡಿದ. ಇನ್ನೇನು ಕೈಗೆ ಸಿಕ್ಕಿತು ಎನ್ನುತ್ತಿದ್ದಂತೆ ತಪ್ಪಿಸಿಕೊಂಡು ಹೋಗುತ್ತಿತ್ತು. ಆಗ ಇನ್ನೊಂದನ್ನು ಹಿಡಿಯಲು ಪ್ರಯತ್ನಿಸುತ್ತಿದ್ದ. ಆದರೆ ಅವು ವೇಗವಾಗಿ ಹಾರಿ ಹೋಗುತ್ತಿದ್ದವು. ಹೀಗೆ ಅವನು ತೋಟದ ಸುತ್ತಲೂ ಓಡಿ ಓಡಿ ಸುಸ್ತಾದ. ಆದರೆ ಚಿಟ್ಟೆ ಮಾತ್ರ ಸಿಗಲಿಲ್ಲ. ಅವು ಸಿಗುವುದಿಲ್ಲ ಎಂಬುದು ಖಾತ್ರಿಯಾದಾಗ ಏದುಸಿರು ಬಿಡುತ್ತಾ ಅಜ್ಜನ ಬಳಿ ಬಂದು ಕುಳಿತುಕೊಂಡ.

ಇವನ ಬರುವಿಕೆಯನ್ನು ಕಾಯುತ್ತಾ ಕುಳಿತಿದ್ದ ಅಜ್ಜ 'ಚಿಟ್ಟೆ ಸಿಕ್ತಾ?' ಎಂದನು. "ಇಲ್ಲಜ್ಜ! ಹಿಡಿಯಲಾಗಲಿಲ್ಲ, ಅವುಹಾರಿಹೋದವು" ಎಂದನು. ಅಜ್ಜ ಒಂದು ಕ್ಷಣ ಮುಗುಳ್ನಕ್ಕು, ಮೊಮ್ಮಗನ ಕೈಹಿಡಿದು ಒಂದು ಮರದ ಕೆಳಕ್ಕೆ ಕರೆದೊಯ್ದನು. 'ಮೊಮ್ಮಗನೇ, ಕೇಳು. ನಿನಗೆ ಅಮೂಲ್ಯವಾದ ಜೀವನ ಪಾಠ ಹೇಳುತ್ತೇನೆ. ನೀನು ಚಿಟ್ಟೆಗಳನ್ನು ಬೆನ್ನಟ್ಟಲು ಸಮಯ ಕಳೆದರೆ ಅವು ಹಾರಿ ಹೋಗುತ್ತವೆ. ಆದರೆ ನೀನು ಅದೇ ಸಮಯವನ್ನು ಸುಂದರವಾದ ಉದ್ಯಾನವನ, ಹೂವಿನ ಗಿಡ ಬೆಳೆಸಲು ಪ್ರಯತ್ನಿಸಿದರೆ, ಚಿಟ್ಟೆಗಳು ನಿನ್ನ ಬಳಿಗೆ ಬರುತ್ತವೆ. ನಮ್ಮ ಯಶಸ್ಸಿನ ಪಯಣ ಚಿಟ್ಟೆಗಳ ಗುರಿಯಂತಿದೆ. ಯದ್ವಾತದ್ವಾ ಚಲಿಸಬೇಕಾಗುತ್ತದೆ. ತಕ್ಷಣದ ಗುರಿಗಳನ್ನು ಕಂಡುಕೊಳ್ಳುವುದು ಸುಲಭ. ಆದರೆ ನಾವು ಏನನ್ನಾದರೂ ಹೊಸದನ್ನು ನಿರ್ಮಿಸುವತ್ತ ಗಮನಹರಿಸಿದಾಗ ಮಾತ್ರ ನಿಜವಾದ ಮ್ಯಾಜಿಕ್ ಸಂಭವಿಸುತ್ತದೆ. ಬಣ್ಣದ ಚಿಟ್ಟೆಗಳನ್ನು ಬೆನ್ನಟ್ಟುವ ಬದಲು, ಆ ಚಿಟ್ಟೆಗಳು ನಿನ್ನ ಬಳಿ ಬರುವಂತೆ ಮಾಡಿಕೊಳ್ಳುವುದೇ ನಿಜವಾದ ಜೀವನಧರ್ಮ. ಅದೇ ನಿಜವಾದ ಯಶಸ್ಸು. ಪ್ರೀತಿ, ಹಣ ಅಥವಾ ಯಶಸ್ಸನ್ನು ಯಾವತ್ತೂ ಬೆನ್ನಟ್ಟಬೇಡ. ಪ್ರಾಮಾಣಿಕ ಪ್ರಯತ್ನ ಮಾಡು. ಎಲ್ಲವೂ ನಿನ್ನ ಬಳಿ ಬರುತ್ತವೆ" ಎಂದರು. ಅಜ್ಜನ ಮಾತು ಸತ್ಯವಲ್ಲವೇ?

# ತೋಟಗಾರಿಕೆ ಇಲಾಖೆ ಸಹಾಯಧನಕ್ಕಾಗಿ ರೈತರಿಂದ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**
ತೋಟಗಾರಿಕೆ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಮೆಗಾ ಮೈಕ್ರೋ ಯೋಜನೆಯಡಿ ಅಗ್ರಿ–ಕಲ್ಚರಲ್ ಸಿಸ್ಟಮ್ ಅಭಿವೃದ್ಧಿ ಪಡಿಸಲು ಸಹಾಯಧನ ನೀಡಲು ಉದ್ದೇಶಿಸಲಾಗಿದ್ದು, ಅರ್ಹ ಬಳ್ಳಾರಿ, ಕುರುಗೋಡು ಮತ್ತು ಕಂಪ್ಲಿ ತಾಲ್ಲೂಕಿನ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅನುದಾನದ ಅಡಿ ಮಾವು, ಸೀತಾಫಲ, ಸೀಬೆ, ಗೇರು, ಹುಣಸೆ, ನೇರಳೆ, ಬೆಣ್ಣೆ ಹಣ್ಣು, ಎಳೆ ನೀರು, ತೆಂಗಿನಕಾಯಿಗಳ ಪ್ರದೇಶ ವಿಸ್ತರಣೆ, ತರಕಾರಿ, ಹೂ ಬೆಳೆ ಪ್ರದೇಶ ವಿಸ್ತರಣೆ, ಜೀವಸಾರ ಘಟಕ ಸ್ಥಾಪನೆ, ಅರಣ್ಯ ಬೆಳೆ ಮುಂತಾದ ಘಟಕಗಳಿಗೆ ಸಹಾಯಧನವನ್ನು ನೀಡಲಾಗುತ್ತದೆ.

ಮೇಲಿನ ಎಲ್ಲಾ ಘಟಕಗಳನ್ನು ರೈತರು ತಮ್ಮ ತಾಕಿನಲ್ಲಿ ಕಡ್ಡಾಯವಾಗಿ ಅಳವಡಿಸಿಕೊಂಡಲ್ಲಿ ನಿಯಮಾನುಸಾರ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಸಹಾಯಧನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಅಥವಾ ದೂ.08392–278177 ಗೆ ಸಂಪರ್ಕಿಸಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ರತ್ನ ಯರಗಲ್ಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA